ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

# ಹುದಲಿ


ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಮೃತ್ಯುಂಜಯ ರುಮಾಲೆ**

ಲೇಖಕರು

**ಪ್ರಕಾಶ ಗಿರಿಮಲ್ಲನವರ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**HUDALI:** An Introducing Book on the Places in Karnataka that Played a Major Role in the Freedom Struggle, Written by Prakash Girimallanavara, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಪ್ರಕಾಶ ಗಿರಿಮಲ್ಲನವರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೪೮

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು-560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಈ ವರ್ಷ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೭೫ ವಸಂತಗಳು ಪೂರ್ಣಗೊಳ್ಳುತ್ತಿವೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಸಮಾಜ ಮತ್ತು ವ್ಯಕ್ತಿಗಳು ನಡೆಸಿದ ಚಳುವಳಿ, ವಹಿಸಿದ ಪಾತ್ರಗಳ ಅನ್ವೇಷಣೆ–ಅಧ್ಯಯನ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸವಿನೆನಪಿನ ಮಾಲೆಯಲ್ಲಿ ೭೫ ಕಿರು ಕೃತಿಗಳನ್ನು ಪ್ರಕಟಿಸುತ್ತಿರುವುದು ಅತ್ಯಂತ ಔಚಿತ್ಯಪೂರ್ಣವಾದುದು.

ಸ್ವಾತಂತ್ರ್ಯ ಹೋರಾಟದ ರೂಪ–ಸ್ವರೂಪ, ಧ್ಯೇಯ ಧೋರಣೆಗಳು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆಯಾಗಿದ್ದವು. ಮುಂಬೈ ಮತ್ತು ಮದ್ರಾಸ್ ಪ್ರದೇಶಗಳಲ್ಲಿ ಈ ಹೋರಾಟ ಆಂಗ್ಲರ ವಿರುದ್ಧವಿದ್ದರೆ, ಮೈಸೂರು ಭಾಗದಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆ ಮತ್ತು ಪರೋಕ್ಷವಾಗಿ ಭಾರತ ಸ್ವಾತಂತ್ರ್ಯಕ್ಕಾಗಿದ್ದಿತು. ಕಲಬುರ್ಗಿ–ಬೀದರ ಪ್ರದೇಶಗಳಲ್ಲಿ ಹೈದರಾಬಾದ ನಿಜಾಮರ ಸಂಸ್ಥಾನದ ರಜಾಕಾರರ ದಬ್ಬಾಳಿಕೆಯ ವಿರುದ್ಧ ನಡೆದ ಹೋರಾಟವಾಗಿತ್ತು. ರಾಮದುರ್ಗ–ಜಮಖಂಡಿ ಮೊದಲಾದ ಸಂಸ್ಥಾನ ರಾಜ್ಯಗಳಲ್ಲಿ ಸರ್ಕಾರದ ಸ್ಥಾಪನೆ ಮತ್ತು ಭಾರತದ ಒಕ್ಕೂಟದಲ್ಲಿ ಈ ಸಂಸ್ಥಾನಗಳ ವಿಲೀನಿಕರಣದ ಉದ್ದೇಶ ಹೊಂದಿದ್ದಿತು. ಈ ಎಲ್ಲ ಬಗೆಯ ಜನಪರ ಹೋರಾಟಗಳಲ್ಲಿ ಸಮಸ್ತ ಕನ್ನಡಿಗರು ಸಕ್ರಿಯವಾಗಿ ಪಾಲುಗೊಂಡರು. ಸ್ವತಂತ್ರ ಸಂಯುಕ್ತ ಪ್ರಜಾಪ್ರಭುತ್ವ ಮತ್ತು ಧರ್ಮನಿರಪೇಕ್ಷ ಗಣರಾಜ್ಯ ಸ್ಥಾಪನೆ ಮೊದಲಾದ ಗುರಿಗಳ ಸಾಫಲ್ಯತೆಗಾಗಿ ಕನ್ನಡಿಗರು ಕ್ರಿಯಾತ್ಮಕವಾಗಿ ಭಾಗವಹಿಸಿದರು.

ಹುದಲಿ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಊರು. ಈ ಊರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಿರು ಕೃತಿಯನ್ನು ರಚಿಸಿರುವೆ. ಸ್ವಾತಂತ್ರ್ಯ ಹೋರಾಟ

ಕುರಿತು ಈವರೆಗೆ ಬಂದ ಎಲ್ಲ ಕೃತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಈ ಕೃತಿ ರಚನೆಗೆ ಆಕರವಾಗಿ ಬಳಸಿಕೊಂಡಿದ್ದೇನೆ. ಆ ಎಲ್ಲ ಲೇಖಕ ಮಹನೀಯರಿಗೆ ವಂದನೆಗಳು.

ಇಂಥ ಒಂದು ಮಹತ್ವದ ಯೋಜನೆಯನ್ನು ರೂಪಿಸಿ, ಕ್ಲುಪ್ತ ಅವಧಿಯಲ್ಲಿ ಕೃತಿಗಳನ್ನು ಪ್ರಕಟಿಸುತ್ತಿರುವ ನಮ್ಮ ದಿನಮಾನದ ಕ್ರಿಯಾಶೀಲ ವಿದ್ವಾಂಸರೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರೂ ಆದ ಡಾ. ಬಿ. ವಿ. ವಸಂತಕುಮಾರ್ ಅವರಿಗೆ ಅನಂತ ವಂದನೆಗಳು. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಎನ್. ಕರಿಯಪ್ಪ ಅವರಿಗೂ ಉಳಿದ ಎಲ್ಲ ಸದಸ್ಯರಿಗೆ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಮೃತ್ಯುಂಜಯ ರುಮಾಲೆ ಅವರು ನನ್ನ ಬೆನ್ನ ಹಿಂದಿನ ಶಕ್ತಿಯಾಗಿ, ಕಣ್ಣ ಮುಂದಿನ ಬೆಳಕಾಗಿ ಮಾರ್ಗದರ್ಶನ ಮಾಡಿದ್ದಾರೆ. ಅವರ ಪ್ರೇರಣೆ–ಪ್ರೋತ್ಸಾಹ ಇಲ್ಲದಿದ್ದರೆ ಇಷ್ಟು ಬೇಗ ಈ ಕೃತಿಗಳನ್ನು ರಚಿಸಲು ಸಾಧ್ಯವಿರಲಿಲ್ಲ. ಅವರಿಗೆ ಅನಂತ ವಂದನೆಗಳು. ಸಂಪಾದಕರಾದ ಡಾ. ಎಸ್.ಜಿ.ರಾಮದಾಸ ರೆಡ್ಡಿ, ಡಾ. ಪ್ರಕಾಶ ಗ. ಖಾಡೆ, ಶ್ರೀ ಎಸ್.ಎಸ್. ನರೇಂದ್ರಕುಮಾರ ಮತ್ತು ರಾಜಲಕ್ಷ್ಮಿ ಕೋಡಿಬೆಟ್ಟು ಅವರಿಗೆ ಅನಂತ ವಂದನೆಗಳು.

ಆಕರ ಸಾಮಗ್ರಿ ಒದಗಿಸಿಕೊಟ್ಟ ಶ್ರೀ ರಾಯನಗೌಡ ಪಾಟೀಲ ಅವರಿಗೆ ವಿಶೇಷವಾದ ಕೃತಜ್ಞತೆಗಳು. ಹುದಲಿ ಸ್ವಾತಂತ್ರ್ಯ ಹೋರಾಟದ ಕುರಿತು ಅನೇಕ ಅಲಕ್ಷಿತ ಸಂಗತಿಗಳತ್ತ ನನ್ನ ಗಮನ ಸೆಳೆದವರು. ನೇಪಥ್ಯಕ್ಕೆ ಸೇರಿದ ಅನೇಕ ಹೋರಾಟಗಾರರ ಮೌಲಿಕ ಮಾಹಿತಿ ನೀಡಿದ್ದಾರೆ. ಅವರಿಗೆ ಅನಂತ ಕೃತಜ್ಞತೆಗಳು. ಡಾ. ಎಸ್. ಆರ್. ಗುಂಜಾಳ, ಡಾ. ಬಿ. ನಂಜುಂಡ ಸ್ವಾಮಿ, ಡಾ. ಸರಜೂ ಕಾಟ್ಕರ್, ಡಾ. ಎಂ. ಎಸ್. ಹುಲ್ಲೋಳಿ ಮೊದಲಾದ ಹಿರಿಯರಿಗೆ ವಂದನೆಗಳು.

**ಪ್ರಕಾಶ ಗಿರಿಮಲ್ಲನವರ**

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಸ್ವಾತಂತ್ರ್ಯ ಹೋರಾಟ: ಹುದಲಿ ೧೫
ಕುಮರಿ ಆಶ್ರಮ ೨೧
೧೯೨೪ರ ಕಾಂಗ್ರೆಸ್ ಅಧಿವೇಶನ ೨೨
ಶಿವಬಸವ ಸ್ವಾಮೀಜಿ–ಗಾಂಧೀಜಿ ೨೪
ಗಾಂಧಿ ಸೇವಾ ಸಂಘದ ಸಮ್ಮೇಳನ ೧೯೩೭ ೨೭
ವಿಶೇಷ ಘಟನೆಗಳು ೨೮
ಹುದಲಿ ಪರಿಸರದ ಪ್ರಮುಖ ಹೋರಾಟಗಾರರು: ೩೦
ಬಡಸದ ಬಸನಗೌಡರು ೩೧
ಶ್ರೀಶೈಲಪ್ಪ ಕಾಗತಿಕರ ೩೬
ಬಿದರಿ ವಾಮರಾಯರು ೩೮
ಅಣ್ಣು ಗುರೂಜಿ ೪೧
ಸಮಾರೋಪ ೪೯
ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೪೫

# ಸ್ವಾತಂತ್ರ್ಯ ಹೋರಾಟ : ಹುದಲಿ

ಬೆಳಗಾವಿ ಜಿಲ್ಲಾ ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿರುವ ಹುದಲಿ ಎಂಬ ಚಿಕ್ಕ ಗ್ರಾಮ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಹುಮುಖ್ಯ ಪಾತ್ರವಹಿಸಿದ್ದು ಇತಿಹಾಸದಲ್ಲಿ ಅಜರಾಮರವಾಗಿ ಉಳಿದಿದೆ. "ಹಳ್ಳಿಗಳೆಂದರೆ ಬರೀ ಮನೆಗಳಲ್ಲ, ಮನುಷ್ಯರಲ್ಲ, ದನಕರುಗಳಲ್ಲ, ರಸ್ತೆ ಚರಂಡಿಗಳಲ್ಲ...ಇವೆಲ್ಲವೂ ಸೇರಿದ ಭಾರತದ ಆತ್ಮ" ಎಂದು ಮಹಾತ್ಮ ಗಾಂಧೀಜಿಯವರು ಮೇಲಿಂದ ಮೇಲೆ ಹೇಳುತ್ತಿದ್ದರು. ಭಾರತದಂತಹ ಮಹಾನ್ ದೇಶದ ಬೇರು ಇರುವುದು ಗ್ರಾಮಭಾರತದಲ್ಲಿ. ಈ ಬೇರನ್ನು ಪೋಷಿಸಿ ಬಲಪಡಿಸಬೇಕೆಂದು ಗಾಂಧೀಜಿ ಬಯಸಿದ್ದರು. ಗ್ರಾಮ ಭಾರತದ ಬಗ್ಗೆ ಗಾಂಧೀಜಿಯವರಿಗೆ ಅಗಾಧ ಒಳನೋಟವಿತ್ತು, ಸಂವೇದನಾಶೀಲ ಮನಸ್ಸಿತ್ತು. ಗಾಂಧೀಜಿಯವರ ಕನಸಿನ ಗ್ರಾಮವಾಗಿ ಆ ಕಾಲದಲ್ಲಿ ಕಂಡದ್ದು ಕರ್ನಾಟಕದ ಹುದಲಿ ಗ್ರಾಮ ಎನ್ನುವುದು ಸಮಸ್ತ ಕನ್ನಡಿಗರು ಹೆಮ್ಮೆ ಮತ್ತು ಅಭಿಮಾನ ಪಡುವ ಸಂಗತಿಯಾಗಿದೆ. ಹುದಲಿ ಗ್ರಾಮವಿರುವ ಪ್ರದೇಶವನ್ನು ಕುಂದರನಾಡು ಎಂದು ಕರೆಯುತ್ತಾರೆ.

ಕನ್ನಡ ನಾಡಿನ ಬಗೆಗೆ ಕವಿರಾಜಮಾರ್ಗಕಾರ ಹೇಳಿದ ಮಾತು ಇಲ್ಲಿ ನೆನಪಾಗುತ್ತಿದೆ. ಅದೆಂದರೆ, 'ಕನ್ನಡ ನಾಡು ಹಲವು ಕನ್ನಡಂಗಳನು ಒಳಗೊಂಡಿರುವ ನಾಡು' ಈ ಕನ್ನಡಂಗಳು ಎಂದರೆ ಭಾಷಿಕವಾಗಿ, ಪ್ರಾದೇಶಿಕವಾಗಿ ವೈವಿಧ್ಯತೆಯನ್ನು ಹೊಂದಿರುವ ಒಳನಾಡುಗಳು. ಭಾಷಿಕವಾಗಿ, ಪ್ರಾದೇಶಿಕವಾಗಿ, ಸಾಂಸ್ಕೃತಿಕವಾಗಿ ಬಹುತ್ವ ಹೊಂದಿರುವ ನಾಡು ಈ ಕನ್ನಡನಾಡು ಬೆಳಗಾವಿ ಪ್ರದೇಶವೊಂದನ್ನೇ ನೋಡಿ, ಅದರೊಳಗೂ ಹಲವು ನಾಡುಗಳಿವೆ. ಹೊಂಗಲನಾಡು ( ಬೈಲಹೊಂಗಲ ಪ್ರದೇಶ) ಗೋಕಾವಿನಾಡು (ಗೋಕಾಕ ಪ್ರದೇಶ) ಕುಂದರನಾಡು ಇತ್ಯಾದಿ. ಈ ನಾಡುಗಳ ಕಥನವಾದರೂ ಒಂದರಿಂದ ಒಂದು ಭಿನ್ನ. ಇವುಗಳ ಬಗ್ಗೆ ಅಧ್ಯಯನ ನಡೆದರೆ ನಮ್ಮ ಸಾಂಸ್ಕೃತಿಕ ವೈವಿಧ್ಯತೆ ಮತ್ತು ವಿಶೇಷತೆಯ ಒಳನೋಟಗಳು ಒದಗುತ್ತವೆ.

ಅದಿನ್ನು ಆಗಬೇಕಿರುವ ಕೆಲಸ. ಈ ಮಾತು ಕನ್ನಡ ನಾಡಿನ ಬೇರೆ ಬೇರೆ ಪ್ರದೇಶಗಳಿಗೂ ಅನ್ವಯಿಸುವಂತಹದ್ದು. ಈಗ ಕುಂದರನಾಡಿನ ಭೂಗೋಲ, ಇತಿಹಾಸ, ಸಂಸ್ಕೃತಿಯತ್ತ ಸಣ್ಣದೊಂದು ದೃಷ್ಟಿ ಹರಿಸೋಣ.

'ಕುಂದರನಾಡು' – ಎಂಬ ಹೆಸರಿನ ಕುರಿತು ಹಲವು ಅಭಿಪ್ರಾಯಗಳಿವೆ. ಕುಂದದ ನಾಡು ಎಂದರೆ ಫಲವತ್ತಾದ ನಾಡು ಎಂದು ಕೆಲವರು ಅರ್ಥ ಹಚ್ಚಿದರೆ, ಮತ್ತೆ ಕೆಲವರು 'ಕುಂದ' ಎಂದರೆ ಬೆಟ್ಟ. ಸಣ್ಣ ಸಣ್ಣ ಬೆಟ್ಟಗಳಿಂದ ಕೂಡಿದ ಪ್ರದೇಶವೇ ಕುಂದರನಾಡು ಎಂದು ಹೆಸರಿನ ಔಚಿತ್ಯವನ್ನು ವಿವರಿಸುವರು. ಈಗಲೂ ಗುಡದರಿ ನಾಡೆಂದು ಕರೆಯುತ್ತಾರೆ. ಸೌಂದತ್ತಿ ರಟ್ಟರ ಕಾಲದಲ್ಲಿ ಗೋಕಾಕ ಹತ್ತಿರದ ಕುಂದರಗಿ ಪಟ್ಟಣವು ಆಡಳಿತ ಕೇಂದ್ರವಾಗಿತ್ತೆಂದು, ಅದರಿಂದಾಗಿ ಕುಂದರಗಿನಾಡು>ಕುಂದರನಾಡು ಆಯಿತೆಂದು ಹೇಳುವುದುಂಟು. ಈ ಹೇಳಿಕೆಯನ್ನು ಪುಷ್ಟೀಕರಿಸಲು ಶಾಸನೋಕ್ತ ಸಾಲುಗಳಿವೆ. ಅವುಗಳಲ್ಲಿ ಒಂದು ಕ್ರಿ.ಶ. ೧೦೪೪ರ ನಂದವಾಡಗಿ ಶಾಸನ. ಇದರಲ್ಲಿ 'ಕುಂದರಗೆಯ ಜಿನಮಂದಿರಮುಮಂ ಪೊಸತಾಗೆ' ಎಂಬ ಪ್ರಸ್ತಾಪವಿದೆ. ಬೈಲಹೊಂಗಲ ತಾಲೂಕಿನ ವಣ್ಣೂರ ಶಾಸನದಲ್ಲಿ 'ಕುಂದರ್ಗೆ ಇಪ್ಪತ್ತು' ಎಂಬ ಉಲ್ಲೇಖವಿದೆ. ಈ ವಣ್ಣೂರು ಕುಂದರನಾಡಿಗೆ ಸೇರಿದ ಗ್ರಾಮವೆಂಬುದು ಇದರಿಂದ ತಿಳಿದು ಬರುತ್ತದೆ. ಹತ್ತನೆಯ ಶತಮಾನದಿಂದಲೇ ಕುಂದರಗಿ ನಾಡು ಆಡಳಿತ ಕೇಂದ್ರವಾಗಿ ಅಸ್ತಿತ್ವಕ್ಕೆ ಬಂದಿರಬಹುದೆನ್ನಲು ಮೇಲಿನ ದಾಖಲೆಗಳು ಸಾಕ್ಷಿಯಾಗುತ್ತವೆ.

ಸವದತ್ತಿ ರಟ್ಟರು ಬೆಳಗಾವಿ ಪ್ರದೇಶದ – 'ಕುಹುಂಡಿ–ಮೂರು ಸಾವಿರ'ವನ್ನು ಆಳಿದರು.. ಕುಹುಂಡಿ ಮಂಡಳವು ಮೂರು ಸಾವಿರ ಹಳ್ಳಿ ಪಟ್ಟಣಗಳನ್ನು ಒಳಗೊಂಡಿತ್ತು. ಅದರಲ್ಲಿ ೧೪ ಊರುಗಳು ಆಡಳಿತ ಕೇಂದ್ರಗಳಾಗಿದ್ದವಂತೆ. ಆ ೧೪ ಕೇಂದ್ರಗಳಲ್ಲಿ ಕುಂದರಗಿಯೂ ಒಂದು ಎಂಬುದು. ಅದು ಕ್ರಿ.ಶ. ೯೪೦ರಿಂದ ೧೨೩೦ರವರೆಗೆ ರಟ್ಟ ಅರಸರ ಆಡಳಿತ ಕೇಂದ್ರವಾಗಿತ್ತೆಂಬುದು ತಿಳಿದು ಬರುತ್ತದೆ. ಶಾಸನಗಳು ಹಾಳಾಗಿ ಪ್ರಾಚೀನ ಜಿನಬಸದಿ, ಮಂದಿರಗಳು ಸಂಪೂರ್ಣ ನಾಶವಾಗಿ ಹಾಳು ಮಣ್ಣಿನ ದಿನ್ನೆಗಳಾಗಿವೆ. ಆದರೆ ಇಂದಿನ ಕುಂದರಗಿಯಲ್ಲಿ ಇತಿಹಾಸದ ಕುರುಹುಗಳು ಉಳಿದಿಲ್ಲ. ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನು ಆಳಿದ, ಅವನ



ರಾಜಧಾನಿಯಾಗಿದ್ದ ಮಾನ್ಯಖೇಟ, ಇಂದಿನ ಮಳಖೇಡದ ಕತೆಯೂ ಇದೇ. ಕಾಲಗರ್ಭದಲ್ಲಿ ಕುರುಹುಗಳು ಪಲ್ಲಟವಾಗಿ ಹೋಗಿವೆ.

ಕುಂದರನಾಡಿನ ಭೌಗೋಳಿಕ ವಿವರಗಳು ಪ್ರೇಕ್ಷಣೀಯವೆನಿಸುತ್ತವೆ. 'ಬೆಳೆ ಸಂದುಂ ಕುಂದದ ವಿಘುಲ ಫಲಚಯಂ ಕ್ಷೇಮಧಾನ್ಯ' ಎಂದು ಕ್ರಿ.ಶ. ೧೧೧೪ರ ನೇಸರಗಿ ಶಾಸನ ಬಣ್ಣಿಸುತ್ತದೆ. 'ಸುತ್ತಲೂ ನೆಲೆ ನಿಂತ ಮಲೆಯ ತೋಳುಗಳಲ್ಲಿ ಉಯ್ಯಾಲೆಯಾಡುತಿದೆ' ಕುಂದರ ನಾಡು ಎಂದು ಕವಿ ಎಸ್.ಡಿ. ಇಂಚಲರು ಹಾಡಿದ್ದಾರೆ. (ರಾಮಕೃಷ್ಣ ಮರಾಠೆ : ಕುಂದರನಾಡ ಪಾಟೀಲರು ಪು. ೩)

ಆ ಕಾಲದ ಕುಂದರನಾಡು ಇಂದು ಬೆಳಗಾವಿ ಜಿಲ್ಲೆಯ ಬೆಳಗಾವಿ, ಗೋಕಾಕ, ಹುಕ್ಕೇರಿ ತಾಲೂಕುಗಳಲ್ಲಿ ಹಂಚಿ ಹೋಗಿದೆ. ಬೈಲಹೊಂಗಲ ತಾಲೂಕಿನಲ್ಲಿಯೂ ಇದರ ಕೆಲವು ಹಳ್ಳಿಗಳಿವೆ. ಕುಂದರಗಿ, ಅಂಕಲಗಿ, ಗೊಡಲಕುಂದರಗಿ, ಹುದಲಿ, ಪಾಶ್ಚಾಪೂರ, ಮಾವನೂರು, ಗೊಡಚಿನಮಲ್ಕಿ, ಚಿಕ್ಕಲದಿನ್ನಿ ಬಸಾಪೂರ ವಣ್ಣೂರ ಈ ನಾಡಿನ ಪ್ರಮುಖ ಊರುಗಳೆನಿಸಿವೆ.

ಹುದಲಿ ಗ್ರಾಮದ ಗಂಗಾಧರರಾವ್ ದೇಶಪಾಂಡೆ ಕರ್ನಾಟಕದ ಸ್ವಾತಂತ್ರ್ಯ ಚಳುವಳಿಯಲ್ಲಿ ಬಹುಪ್ರಮುಖವಾದ ಪಾತ್ರವನ್ನು ಆಡಿದವರು. ಅಂತೆಯೇ ಕರ್ನಾಟಕದ ಜನರು ಅವರನ್ನು "ಕರ್ನಾಟಕದ ಸಿಂಹ" ಎಂದು ಕರೆದರು. ಗಂಗಾಧರರಾವ್ ಅವರ ಪ್ರಯತ್ನ ಕಾರಣವಾಗಿ ಗಾಂಧೀಜಿಯವರು ಹುದಲಿ ಗ್ರಾಮದಲ್ಲಿ ಒಂದು ವಾರಗಳ ಕಾಲ ನೆಲೆ ನಿಂತರು ಎಂಬುದು ಇಂದು ಇತಿಹಾಸ. ಗಂಗಾಧರರಾವ್ ಅವರನ್ನು ಕೇಂದ್ರಬಿಂದುವಾಗಿಟ್ಟುಕೊಂಡು ಹುದಲಿ ಪರಿಸರದ ಸ್ವಾತಂತ್ರ್ಯ ಕಥನವನ್ನು ಇಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

* * *

೧೮೮೫ರಲ್ಲಿ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಸಶಸ್ತ್ರಕ್ರಾಂತಿಯ ನೇತಾರರು ಬ್ರಿಟಿಷರಿಂದ ಗಲ್ಲಿಗೇರಿಸಲ್ಪಟ್ಟು, ಹೋರಾಟ ದಿಕ್ಕು ತಪ್ಪುವ ಸಂದರ್ಭವಿತ್ತು. ಆಗ ಈ ಹೋರಾಟದ ನೇತೃತ್ವವನ್ನು ವಹಿಸಿಕೊಂಡವರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಮಹಾರಾಷ್ಟ್ರದಲ್ಲಿ

ಬಾಲಗಂಗಾಧರ ತಿಲಕರು "ಅಖಿಲ ಭಾರತ" ಎಂಬ ಕ್ರಾಂತಿಕಾರಿ ಗುಪ್ತ ಸಂಘಟನೆಯೊಂದನ್ನು ಸ್ಥಾಪಿಸಿದ್ದರು. ಈ ಸಂಘಟನೆಯಲ್ಲಿ ಕರ್ನಾಟಕದಿಂದ ಸೇರಿಕೊಂಡ ಮೊಟ್ಟಮೊದಲ ವ್ಯಕ್ತಿ ಹುದಲಿಯ ಗಂಗಾಧರ ರಾವ ದೇಶಪಾಂಡೆ, ಗೋವಿಂದರಾವ ಯಾಳಗಿಯವರು.

೧೯೦೫ರಲ್ಲಿ ಲಾರ್ಡ್ ಕರ್ಜನ್ ಬಂಗಾಲ ಪ್ರಾಂತವನ್ನು ವಿಭಜನೆ ಮಾಡಿದ. ಇದರ ಪರಿಣಾಮ ಇಡೀ ದೇಶದಲ್ಲಾಯಿತು. ಆದರೆ ಕರ್ನಾಟಕ ಇದಕ್ಕೆ ನೀರಸ ಪ್ರತಿಕ್ರಿಯೆ ನೀಡಿತ್ತು. ಹರ್ಡೇಕರ ಮಂಜಪ್ಪನವರು ಒಬ್ಬರೇ ತಮ್ಮ ಧನುರ್ಧಾರಿ ಪತ್ರಿಕೆಯಲ್ಲಿ ಈ ವಿಭಜನೆಯನ್ನು ಖಂಡಿಸಿ ಬರೆದಿದ್ದರು. ಇಂಥ ಸಂದರ್ಭದಲ್ಲಿ ಬಾಲಗಂಗಾಧರ ತಿಲಕರು ಮಹಾರಾಷ್ಟ್ರದ ಪುಣೆಯಲ್ಲಿ ಒಂದು ಸಾರ್ವಜನಿಕ ಭಾಷಣ ಮಾಡಿ ವಿದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ, ಸ್ವದೇಶಿ ಬಟ್ಟೆಗಳನ್ನು ಧರಿಸುವಂತೆ ಕೋರಿಕೊಂಡರು. ಸ್ವರಾಜ್ಯ–ಸದ್ವೇಶಿ ಎಂಬ ತಿಲಕರ ಮಾತುಗಳು ಜನರ ಮೇಲೆ ಮಂತ್ರದಂತೆ ಪರಿಣಾಮ ಬೀರಿದವು. ಬಾಲಗಂಗಾಧರ ತಿಲಕರ ಆಪ್ತ ಶಿಷ್ಯರಲ್ಲಿ ಒಬ್ಬರಾದ ಗಂಗಾಧರರಾವ ದೇಶಪಾಂಡೆ ಅವರು ಬೆಳಗಾವಿಯಲ್ಲಿ ಇದೇ ಕಾಲಕ್ಕೆ ವಿದೇಶಿ ಬಟ್ಟೆಗಳನ್ನು ಸುಡುವ ಚಳುವಳಿ ಪ್ರಾರಂಭಿಸಿದರು. ಬೆಳಗಾವಿಯಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆಗಳು ೧೯೦೫ರಿಂದ ಜೋರಾಗಿ ಪ್ರಾರಂಭವಾದವು.

ಬಾಲಗಂಗಾಧರ ತಿಲಕರ ಪ್ರತಿಯೊಂದು ಹೋರಾಟದಲ್ಲಿಯೂ ಗಂಗಾಧರ ರಾವ ದೇಶಪಾಂಡೆಯವರು ಭಾಗವಹಿಸುತ್ತಿದ್ದರು. ೧೯೦೭ರಲ್ಲಿ ಸೂರತ್ ನಗರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಜರುಗಿತು. ಇಲ್ಲಿ ಸೌಮ್ಯವಾದಿ–ಉಗ್ರವಾದಿ ಎರಡು ಪಂಗಡಗಳಾಗಿ ಕಾಂಗ್ರೆಸ್ ಇಬ್ಬಾಗವಾಯಿತು. ಇದೇ ಹೊತ್ತಿನಲ್ಲಿ ತಿಲಕರು "ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು" ಎಂದು ಘೋಷಿಸಿದರು. ೧೯೦೮ರಲ್ಲಿ ತಿಲಕರು ಕೇಸರಿ ಪತ್ರಿಕೆಯಲ್ಲಿ ಬರೆದ ಬ್ರಿಟಿಷ್ ವಿರೋಧಿ ಲೇಖನಗಳ ಪರಿಣಾಮವಾಗಿ ಆರು ವರ್ಷಗಳ ಕಾಲ ಜೈಲುವಾಸ ಅನುಭವಿಸುವಂತಾಯಿತು. ಈ ಸಂದರ್ಭದಲ್ಲಿ ಗಂಗಾಧರ ರಾವ ದೇಶಪಾಂಡೆ ಮತ್ತು ಕಾಕಾಸಾಹೇಬ ಕಾಲೇಲಕರ ಕೂಡಿ ತಿಲಕರ ಸಂದೇಶಗಳನ್ನು ಪ್ರಸಾರ ಮಾಡಲು ಮುಂಬೈ ನಗರದಿಂದ ರಾಷ್ಟ್ರಮತ ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆ ಬಹಳ ದಿನ ನಡೆಯಲಿಲ್ಲವಾದರೂ ಇದು ತಿಲಕರ ಮತ್ತು ಗಂಗಾಧರ ರಾವ್ ಅವರ ನಡುವೆ ಇದ್ದ ಅನ್ಯೋನ್ಯತೆಗೆ ಸಾಕ್ಷಿಯಾಗಿದೆ. ಬಾಲಗಂಗಾಧರ ತಿಲಕರು ೧೯೨೧ ಆಗಸ್ಟ್ ೧ ರಂದು ನಿಧನರಾದರು. ಸ್ವಾತಂತ್ರ್ಯ ಹೋರಾಟ ಮಾಡುತ್ತಿದ್ದ ಸಾವಿರಾರು ಜನರಿಗೆ ದಿಕ್ಕು ತೋಚದಂತಾಯಿತು.



ಭಾರತೀಯರ ಈ ಹೋರಾಟದ ಕ್ಷಿತಿಜದಲ್ಲಿ ಧ್ರುವನಕ್ಷತ್ರದಂತೆ ಕಾಣಿಸಿ ಕೊಂಡವರು ಮಹಾತ್ಮ ಗಾಂಧೀಜಿಯವರು. ದಕ್ಷಿಣ ಆಫ್ರಿಕದಲ್ಲಿ ಹೋರಾಟ ಮಾಡುತ್ತಲೇ ಜನಪ್ರಿಯರಾಗಿದ್ದ ಗಾಂಧೀಜಿ ಭಾರತದಲ್ಲಿ ಗೋಪಾಲ ಕೃಷ್ಣ ಗೋಖಲೆ ಅವರನ್ನು ತಮ್ಮ ರಾಜಕೀಯ ಗುರುಗಳನ್ನಾಗಿ ಸ್ವೀಕರಿಸಿದರು. ಇದೇ ಹೊತ್ತಿನಲ್ಲಿ ತಿಲಕರ ನಿರ್ಗಮನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಂದು ಶೂನ್ಯದ ನಿರ್ವಾತ ಸೃಷ್ಟಿಯಾಗಿತ್ತು. ಈ ನಿರ್ವಾತವನ್ನು ಹೋಗಲಾಡಿಸಲು ಬಂದವರೇ ಮಹಾತ್ಮ ಗಾಂಧೀಜಿಯವರು.

ಇಡೀ ದೇಶವನ್ನು ಸುತ್ತಿ ಜನರ ಮನೋಭಿತ್ತಿಯಲ್ಲಿ ಸ್ವಾತಂತ್ರ್ಯದ ಬೀಜ ಬಿತ್ತುವ ಕಾರ್ಯವನ್ನು ಗಾಂಧೀಜಿ ಮಾಡತೊಡಗಿದರು. ಈ ಸಂದರ್ಭದಲ್ಲಿ ಸಹಜವಾಗಿಯೇ ಗಂಗಾಧರ ರಾವ ದೇಶಪಾಂಡೆ ಅವರು ತಮ್ಮ ತಿಲಕ ಭಕ್ತಿಯನ್ನು ಗಾಂಧೀ ಭಕ್ತಿಯನ್ನಾಗಿ ಪರಿವರ್ತಿಸಿಕೊಂಡರು. ತಿಲಕರಿಲ್ಲದ ಹೋರಾಟಕ್ಕೆ ನಾಯಕತ್ವ ವಹಿಸಿದ ಗಾಂಧೀಜಿಯವರು ಗಂಗಾಧರ ರಾವ ಅವರಿಗೆ ಅತ್ಯಂತ ಪೂಜ್ಯನೀಯ ವ್ಯಕ್ತಿಯಾದರು. ಗಾಂಧೀಜಿಯವ ನಡೆ ನುಡಿ ಆದರ್ಶಗಳು ಇವರಲ್ಲಿ ಮತ್ತೆ ಹೊಸ ಹುರುಪು ಹುಮ್ಮಸ್ಸುಗಳನ್ನು ತುಂಬಿದವು.

ಗಾಂಧೀಜಿಯವರು ಸ್ವಾತಂತ್ರ್ಯದ ಜೊತೆಗೆ ಖಾದಿ ಪ್ರಚಾರವಾಗಬೇಕೆಂದು ಬಯಸುತ್ತಿದ್ದರು. ಹೀಗಾಗಿ ಕರ್ನಾಟಕದ ನೆಲದಲ್ಲಿ ಅಲ್ಲಲ್ಲಿ ಖಾದಿ ಕೇಂದ್ರಗಳು ಸ್ಥಾಪನೆಯಾಗತೊಡಗಿದವು. ಬೆಳಗಾವಿ ಜಿಲ್ಲೆಯಲ್ಲಿಯೂ ಹುದಲಿ, ಪಾಶ್ಚಾಪುರ ಗಳಲ್ಲಿ ಖಾದಿ ಉತ್ಪಾದನಾ ಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ಯಮಕನಮರಡಿ, ನಿಪ್ಪಾಣಿ, ಬೆಳಗಾವಿ, ಹುದಲಿ, ಅಕ್ಕತಂಗೇರಹಾಳ ಮೊದಲಾದ ಊರುಗಳಲ್ಲಿ ರಾಷ್ಟ್ರೀಯ ಶಾಲೆಗಳು ಪ್ರಾರಂಭವಾದವು. ಇಂಥ ರಾಷ್ಟ್ರೀಯ ಶಾಲೆಗಳಲ್ಲಿ ಹೆಚ್ಚಾಗಿ ಮರಾಠಿಯನ್ನೇ ಕಲಿಸಲಾಗುತ್ತಿತ್ತು. ಇಂಥ ಸಂದರ್ಭದಲ್ಲಿ ಕನ್ನಡದ ಸ್ಥಿತಿ ಗತಿ ತುಂಬ ಶೋಚನೀಯವಾಗಿತ್ತು. ಗಂಗಾಧರ ರಾವ ದೇಶಪಾಂಡೆ ಅವರು ಕನ್ನಡದ ನೆಲದವರಾಗಿದ್ದರೂ ಮರಾಠಿ ಕಡೆಗೆ ಅವರದು ಹೆಚ್ಚು

ಒಲವಿತ್ತು ಎಂಬುದನ್ನು ಬೆಟಗೇರಿ ಕೃಷ್ಣಶರ್ಮರು ತಮ್ಮ ಆತ್ಮಕಥೆಯಲ್ಲಿ ದಾಖಲಿಸಿದ್ದಾರೆ.

ಲೋಕಮಾನ್ಯ ತಿಲಕ ಮತ್ತು ಮಹಾತ್ಮಾ ಗಾಂಧೀಜಿಯವರ ಪ್ರಭಾವದಿಂದಾಗಿ ರಾಷ್ಟ್ರೀಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಕೃಷ್ಣಶರ್ಮರು ಬಯಸಿದರು. ೧೯೨೧ರಲ್ಲಿ ಬೆಳಗಾವಿಯಲ್ಲಿ ರಾಷ್ಟ್ರೀಯ ಶಿಕ್ಷಣ ಸಮಿತಿಯವರು 'ರಾಷ್ಟ್ರೀಯ ವಿದ್ಯಾಲಯ' ಸ್ಥಾಪಿಸಿದರು. ಅಲ್ಲಿ ಕೃಷ್ಣಶರ್ಮರು ಶಿಕ್ಷಕರಾಗಿ ಆಯ್ಕೆಯಾದರು.

ಕೃಷ್ಣಶರ್ಮರು ರಾಷ್ಟ್ರೀಯ ವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದ ಸಂದರ್ಭದಲ್ಲಿ ಬೆಳಗಾವಿ ಸಂಪೂರ್ಣ ಮರಾಠಿಮಯವಾಗಿತ್ತು. ರಾಷ್ಟ್ರೀಯ ಶಾಲೆಯಲ್ಲಿಯೂ ಮರಾಠಿ ವಾತಾವರಣವಿತ್ತು. ಬೆಳಗಾವಿಯಲ್ಲಿ ಕನ್ನಡ ವಾತಾವರಣ ನಿರ್ಮಾಣ ಮಾಡುವಲ್ಲಿ ಕೃಷ್ಣಶರ್ಮರು ಪಟ್ಟ ಪಾಡು ಅಪಾರ. ಮುಂದೆ ಬೆಳಗಾವಿಯಲ್ಲಿ ಕನ್ನಡಪರ ವಾತಾವರಣಕ್ಕಾಗಿ ದುಡಿದ ಅನಂತರಾವ ಚಿಕ್ಕೋಡಿ, ಅರವಿಂದ ಜೋಶಿ, ಕೃಷ್ಣರಾವ ಜೋಶಿ, ಚಿಟಣಿಸ ಮೊದಲಾದವರು ಕೃಷ್ಣಶರ್ಮರ ಶಿಷ್ಯರಾಗಿದ್ದರು ಎಂಬುದು ಹೆಮ್ಮೆಯ ವಿಷಯ.

ರಾಷ್ಟ್ರೀಯ ಶಾಲೆಯಲ್ಲಿ ಪ್ರಾರ್ಥನಾ ಗೀತೆಗಳನ್ನು ಮರಾಠಿಯಲ್ಲಿಯೇ ಹಾಡುತ್ತಿದ್ದರು. ಅವರ ಹಾಡುಗಳಲ್ಲಿ ಶಿವಾಜಿ, ತಾನಾಜಿ, ಏಸಾಜಿ ಇವರ ವರ್ಣನೆ, ಪವಾಡ ತುಂಬಿದ ಗೀತೆಗಳು, ಲಾವಣಿಗಳು ಹೆಚ್ಚಾಗಿ ಇರುತ್ತಿದ್ದವು. ಇದನ್ನು ನೋಡಿ ಕೃಷ್ಣಶರ್ಮರ ಕರುಳು ಹಿಂಡಿದಂತಾಯಿತು. ಕನ್ನಡ ಭಾಷೆಗೆ ದಿಕ್ಕು ದೆಸೆ ಇಲ್ಲದಿರುವುದನ್ನು ಕಂಡು ಅವರು ಮರುಗಿದರು. ಸ್ವರಾಜ್ಯ ಆಶ್ರಮದಲ್ಲಿದ್ದ ಅನೇಕ ಕಾರ್ಯಕರ್ತರು ಕನ್ನಡಿಗರಾಗಿದ್ದರೂ ಮರಾಠಿ ಮೋಹ ಬಿಟ್ಟಿರಲಿಲ್ಲ.

'ಬೆಳಗಾವಿ ಜಿಲ್ಲೆಯವರೇ ಆದ ಅನೇಕ ಕಾರ್ಯಕರ್ತರು ಸ್ವರಾಜ್ಯ ಆಶ್ರಮದಲ್ಲಿಯೂ ಇದ್ದರು; ರಾಷ್ಟ್ರೀಯ ಶಾಲೆಯ ಶಿಕ್ಷಕರಲ್ಲಿಯೂ ಇದ್ದರು. ಅವರ ಹೆಸರುಗಳನ್ನು ನೋಡಿದರೆ ನಗೆ ಬರಬೇಕು. ಹುನ್ನಲಗಿಕರ, ಇವರು ಚಿಕ್ಕೋಡಿ ತಾಲೂಕಿನವರು. ಆದರೂ ಮರಾಠಿಗರು. ಇನ್ನೊಬ್ಬರು ಇಟ್ನಾಳಕರ; ಇವರು ಕನ್ನಡಿಗರಾದರೂ ಮರಾಠಿಯಲ್ಲಿಯೇ ಶಿಕ್ಷಣವನ್ನು ಪಡೆದವರು. ಮರಾಠಿಯ ಕಡೆಗೆ ಒಲವು ಇದ್ದವರು. ಹೀಗೆಯೇ ಎಷ್ಟು ಜನರ ಹೆಸರನ್ನು



ನಾನು ಹೇಳಲಿ? ಎಲ್ಲರೂ ಹದಿನಾರಣೆ ಕನ್ನಡಿಗರಾದರೂ ಎಲ್ಲರೂ ಮಹಾರಾಷ್ಟ್ರ ಭಾಷೆಯ ಪ್ರಭಾವಕ್ಕೆ ಒಳಗಾದವರು. ಬೆಳಗಾವಿಯ ಧುರೀಣರಲ್ಲಿಯೂ ಕನ್ನಡದ ಪ್ರೀತಿ ಇಟ್ಟುಕೊಂಡವರು ಒಬ್ಬರೂ ಇರಲಿಲ್ಲವೆಂದು ಹೇಳಬಹುದು. ಹಿರಿಯ ಧುರೀಣರಾದ ಗಂಗಾಧರರಾಯರು ಮರಾಠಿ ಭಾಷೆಯ ಮೋಹದಿಂದ ಆವೃತರಾದವರು. ಅವರು ಕರ್ನಾಟಕದಲ್ಲಿ ಎಲ್ಲಿಯೂ ತಪ್ಪಿ ಕೂಡ ಕನ್ನಡ ಮಾತಿಗೆ ಅವಕಾಶ ಕೊಡುತ್ತಿರಲಿಲ್ಲ. ಯಾಳಗಿ ಗೋವಿಂದರಾಯರು ಕನ್ನಡಿಗರಾದ ತಾಯಿಯ ಹೊಟ್ಟೆಯಿಂದ ಹುಟ್ಟಿದವರಾದರೂ, ಕನ್ನಡ ವಧುವಿನ ಕೈ ಹಿಡಿದವರಾದರೂ, ಅವರ ಮನೆಯಲ್ಲಿ ಮರಾಠಿಗೆ ಪ್ರಥಮ ಸ್ಥಾನ. ಗಂಗಾಧರ ರಾಯರ ಶಿಷ್ಯರಾದ ಪುಂಡಲೀಕಜಿ ಎಂಬುವರು ಮೂಲದಲ್ಲಿ ಹಾವೇರಿಯವರಾದರೂ ಕನ್ನಡವನ್ನು ಮಾತನಾಡಲು ಬರುತ್ತಿರಲಿಲ್ಲ. ಮಿಕ್ಕೆಲ್ಲ ಧುರೀಣರಿಗೂ ಮರಾಠಿಯ ಕಡೆಗೇ ಒಲವು' (ನನ್ನ ನೆನಪುಗಳು : ಪು. ೨೭೪)

ಇಂಥ ಸಂಕ್ರಮಣ ಸ್ಥಿತಿಯಲ್ಲಿ ಬೆಟಗೇರಿ ಕೃಷ್ಣಶರ್ಮರು ರಾಷ್ಟ್ರೀಯ ಪದ್ಯಾವಳಿ ಎಂಬ ಎರಡು ಕನ್ನಡ ಗೀತಸಂಗ್ರಹಗಳನ್ನು ಬರೆದು ಪ್ರಕಟಿಸಿದರು. ಆದರೆ ಬ್ರಿಟಿಷ್ ಸರಕಾರ ಈ ಎರಡೂ ಸಂಕಲನಗಳನ್ನು ಮುಟ್ಟುಗೋಲು ಹಾಕಿಕೊಂಡಿತು ಎಂಬುದು ವಿಷಾದದ ಸಂಗತಿಯಾಗಿದೆ.

### ಕುಮರಿ ಆಶ್ರಮ

ಹುದಲಿಯ ಸಮೀಪ ಕುಮರಿ ಎಂದು ಕರೆಯುವ ಪ್ರದೇಶದಲ್ಲಿ ಗಂಗಾಧರ ರಾವ ದೇಶಪಾಂಡೆ ಅವರ ಜಮೀನಿತ್ತು. ಎರಡು ಗುಡ್ಡಗಳ ನಡುವಿನ ಪ್ರದೇಶಕ್ಕೆ ಕನ್ನಡದಲ್ಲಿ ಕುಮರಿ ಎಂದು ಕರೆಯುತ್ತಾರೆ. ಗುಡ್ಡದ ನಡುವೆ ಇರುವ ಕುಮರಿಯಲ್ಲಿ ಗಂಗಾಧರರಾವ್ ಅವರು ತಮ್ಮ ಏಳು ಎಕರೆ ಜಮೀನಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು. ಈ ಆಶ್ರಮದಲ್ಲಿ ಪುಂಡಲೀಕಜಿ ಕಾತಗಡೆ, ರಾಮಚಂದ್ರ ವಡವಿ, ವಾಮನರಾವ ಬಿದರಿ, ದಾದಾ ಕಾಳೆ, ವಾಮನರಾವ ಕುಲಕಣಿ, ಗಂಗಪ್ಪ ಯಮಕನಮರಡಿ ಮೊದಲಾದವರು ಇರುತ್ತಿದ್ದರು. ಗಂಗಾಧರ ರಾವ ದೇಶಪಾಂಡೆಯವರ ಜ್ಞಾನಶಕ್ತಿಗೆ ಇವರೆಲ್ಲ ಕ್ರಿಯಾಶಕ್ತಿಯಾಗಿ ದುಡಿಯುತ್ತಿದ್ದರು. ಗಾಂಧೀಜಿಯವರ ಸಾಬರಮತಿ ಆಶ್ರಮದ ಮಾದರಿಯಲ್ಲಿ ಕುಮರಿ ಆಶ್ರಮ ಹುಟ್ಟಿಕೊಂಡಿತ್ತು. ಈ ಮೂಲಕ ಸ್ವಾತಂತ್ರ್ಯ ಹೋರಾಟ, ಸ್ವದೇಶಿ ಚಿಂತನೆಗಳು ಜನರಲ್ಲಿ ಜಾಗೃತಿಯನ್ನುಂಟು ಮಾಡತೊಡಗಿದವು.

ಗಾಂಧೀಜಿಯವರು ೧೯೨೧ರಲ್ಲಿ ಅಸಹಕಾರ ಆಂದೋಲನಕ್ಕೆ ಕರೆಕೊಟ್ಟರು. ಈ ಚಳುವಳಿಯಲ್ಲಿ ಗಂಗಾಧರರಾವ್ ದೇಶಪಾಂಡೆ ಅವರು ಭಾಗವಹಿಸಿದ ಕಾರಣಕ್ಕಾಗಿ ಅವರಿಗೆ ಸೆಪ್ಟಂಬರ್ ತಿಂಗಳಲ್ಲಿ ಆರು ತಿಂಗಳುಗಳ ಜೈಲು ಶಿಕ್ಷೆ ಆಯಿತು. ಈ ವಿಷಯ ತಿಳಿದ ಗಾಂಧೀಜಿ ದೇಶಪಾಂಡೆ ಅವರಿಗೆ ಪತ್ರ ಬರೆದು "ಸೆರೆಮನೆಯ ಬಹುಮಾನವನ್ನು ಪಡೆಯುವ ಸುಪ್ರಸಂಗ ನಿಮಗೆ ಈಗ ಬಂದಿದೆ ಎಂದು ಕೇಳಿದೆ. ಅಂಥ ಸುದೈವ ನನ್ನ ಪಾಲಿಗೆ ಬರಲಿಲ್ಲವಲ್ಲ ಎಂದು ನನಗೆ ಅಸೂಯೆ....ನೀವೇ ಧನ್ಯರು" ಎಂದು ಹೇಳಿದ್ದರು. ಇದು ಗಾಂಧೀಜಿ ಅವರಿಗೆ ಗಂಗಾಧರರಾವ್ ಅವರ ಮೇಲಿದ್ದ ಪ್ರೀತಿ ಮಮತೆಯನ್ನು ತೋರಿಸುತ್ತದೆ.

## ೧೯೨೪ರ ಕಾಂಗ್ರೆಸ್ ಅಧಿವೇಶನ

ಬೆಳಗಾವಿಯಲ್ಲಿ ಅಖಿಲ ಭಾರತ ೩೯ನೇ ಕಾಂಗ್ರೆಸ್ ಅಧಿವೇಶನ ಜರುಗಿದ್ದು ಒಂದು ಚಾರಿತ್ರಿಕ ಮಹತ್ವದ ಘಟನೆಯಾಗಿದೆ. ಇಂಥ ಮಹಾ ಅಧಿವೇಶನಕ್ಕೆ ಅಧ್ಯಕ್ಷರಾದವರು ಮಹಾತ್ಮ ಗಾಂಧೀಜಿ. ಅವರು ಮೊದಲ ಸಲ ಅಧ್ಯಕ್ಷರಾಗಲು ಒಪ್ಪಿಕೊಂಡದ್ದು ವಿಶೇಷ. (ಅದೇ ಅವರ ಕೊನೆಯ ಅಧ್ಯಕ್ಷ ಪದವಿಯೂ ಆಯಿತು) ಗಂಗಾಧರ ರಾವ್ ದೇಶಪಾಂಡೆ ಅವರು ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿ ಆಗಿದ್ದಾಗ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿವೇಶನ ಆಗಬೇಕೆಂದು ಪಟ್ಟುಹಿಡಿದರು. ಕರ್ನಾಟಕದ ಯಾವ ಭಾಗದಲ್ಲಿ ಅಧಿವೇಶನ ನಡೆಯಬೇಕೆಂಬ ಕುರಿತು ಚರ್ಚೆ ನಡೆಯಿತು. ಆಗ ಗಂಗಾಧರ ರಾವ ದೇಶಪಾಂಡೆ ಅವರು ಬೆಳಗಾವಿಯ ಜನ ಮೂವತ್ತು ಸಾವಿರ ರೂ.ಗಳನ್ನು ಅಧಿವೇಶನಕ್ಕೆ ನೀಡಲು ಸಿದ್ಧರಿದ್ದಾರೆಂದು ಹೇಳಿದರು. ಆಗ ಎಲ್ಲ ಮುಖಂಡರು ಬೆಳಗಾವಿಯಲ್ಲಿ ಅಧಿವೇಶನ ಮಾಡಲು ಒಪ್ಪಿಗೆ ನೀಡಿದರು. ಹೀಗಾಗಿ ಬೆಳಗಾವಿಯಲ್ಲಿ ಈ ಅಧಿವೇಶನ ನಡೆಯುವಂತಾಯಿತು. ಗಂಗಾಧರ ರಾವ ದೇಶಪಾಂಡೆ ಅವರು ಸ್ವಾಗತಾಧ್ಯಕ್ಷರಾದರು. ಈ ಅಧಿವೇಶನಕ್ಕೆ ವಿಜಯನಗರದ ವೈಭವ ಇರಲೆಂದು ಅಧಿವೇಶನ ಜರುಗುವ ಪ್ರದೇಶವನ್ನು ವಿಜಯನಗರವೆಂದು ಕರೆದರು. ಕುಡಿಯುವ ನೀರಿಗಾಗಿ ಒಂದು ಬೃಹತ್ ಬಾವಿಯನ್ನು ತೆಗೆದರು. ಅದಕ್ಕೆ ಪಂಪಾ ಸರೋವರವೆಂದು ಕರೆದರು. ಹೀಗೆ ವಿಜಯನಗರದ ನೆನಪು ಹಸಿರಾಗುವಂತೆ ಮಾಡಿದರು. ಈ ಅಧಿವೇಶನಕ್ಕೆ ಸಾಹಿತಿಗಳಾದ ಡಿ.ವಿ.ಗುಂಡಪ್ಪ, ವಿ.ಸೀ. ಮೊದಲಾದವರು ಬಂದಿದ್ದರು. ಈ ಅಧಿವೇಶನ ಮುಗಿಸಿಕೊಂಡು ಅವರು



ಹಂಪಿ ಮೊದಲಾದ ಕಡೆ ಪ್ರವಾಸ ಮಾಡಿದರು. ಅದನ್ನೇ ವಿ.ಸೀ. ಅವರು "ಪಂಪಾಯಾತ್ರೆ" ಎಂಬ ಕೃತಿಯನ್ನು ರಚಿಸಿದ್ದಾರೆ.

ಈ ಅಧೀವೇಶನದಲ್ಲಿ ಭಾಗವಹಿಸಿದ್ದ ಹರ್ಡೇಕರ ಮಂಜಪ್ಪನವರು ತಮ್ಮ ಆತ್ಮಕಥೆಯಲ್ಲಿ ಹೀಗೆ ವಿವರಿಸಿದ್ದಾರೆ– "೧೯೨೪ನೆಯ ಬೆಳಗಾಂವ ಕಾಂಗ್ರೆಸ್ಸ್ ಅಧಿವೇಶನಕ್ಕಾಗಿ 'ಬಸವೇಶ್ವರ ಸೇವಾದಳ' ಎಂಬ ಒಂದು ಸ್ವಯಂ ಸೇವಕ ದಳವನ್ನು ಏರ್ಪಡಿಸಿ ಆಶ್ರಮದಲ್ಲಿ ಮೂರು ವಾರ ಅವರನ್ನಿಟ್ಟುಕೊಂಡು ಬೆಳಗಾವ ಕಾಂಗ್ರೆಸ್ಸಿಗೆ ಕರೆದುಕೊಂಡು ಹೋದೆನು. ಆಗ ನಾನು 'ಬಸವ ಚರಿತ್ರೆ'ಯನ್ನು ಬರೆದು ಪ್ರಕಟಿಸಿದ್ದೆನು. ಪೌರಾಣಿಕ ವಿಚಾರ ಸರಣಿಯವರಿಗೆ ಅದು ಸರಿತೋರದಿದ್ದವರೂ ಆಧುನಿಕ ವಿಚಾರಸರಣಿಯವರಿಗೆ ಪ್ರಿಯವಾಗಿದ್ದಿತು. ಅದರ ಮೇಲಿಂದಲೇ ಸತ್ಯಾಗ್ರಹಿ ಬಸವೇಶ್ವರ ಎಂಬ ಒಂದು ಚಿಕ್ಕ ಪುಸ್ತಕವನ್ನು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಶ್ರೀ ಬಿಡೆ ಲಕ್ಷ್ಮಣರಾಯರಿಂದ ಬರೆಯಿಸಿ ಅಚ್ಚು ಮಾಡಿಸಿ ಕಾಂಗ್ರೆಸ್ ಅಧಿವೇಶನ ಕಾಲದಲ್ಲಿ ಪರ ಪ್ರಾಂತಗಳಿಂದ ಬಂದ ಪ್ರಮುಖರಿಗೆಲ್ಲಾ ಉಚಿತವಾಗಿ ಕೊಡಿಸಿದೆನು. ಇವುಗಳ ಅಚ್ಚಿನ ವೆಚ್ಚವನ್ನು ಸಾಬೋಜಿ ಗಂಗಾಧರಪ್ಪನವರು ವಹಿಸಿದ್ದರು. ಗಾಂಧೀಜಿಯವರು ಬೆಳಗಾವಿಗೆ ರಾಷ್ಟ್ರಿಯ ಸಭೆಯ ಅಧ್ಯಕ್ಷರಾಗಿ ಬಂದಾಗ ಅವರ ಬಿಡದಿಯ ಹತ್ತಿರವೇ ನಾನೂ ಇರಲು ಅನುಕೂಲ ಮಾಡಿಕೊಂಡಿದ್ದೆನು. ನಾನು ಗಾಂಧೀಜಿಯವರಿಗೆ ಸ್ವಲ್ಪ ಪರಿಚಯದವನಾಗಿಯೇ ಇದ್ದೆನು. ನನ್ನ ಅನೇಕ ಮಿತ್ರರಿಗೂ ಹಿತಚಿಂತಕರಿಗೂ ಗಾಂಧೀಜಿಯವರ ದರ್ಶನ ಮಾಡಿಸಬೇಕೆಂಬ ಕುತೂಹಲ ನನಗೆ ಹೆಚ್ಚು. ಅವರಿಗೂ ಗಾಂಧೀಜಿಯವರನ್ನು ನೋಡಬೇಕೆಂಬ ಇಚ್ಛೆ. ನನ್ನ ಪ್ರಿಯ ಸ್ವಾಮಿರಾಯರಿಗೆ ತೋರಿಸಬೇಕೆಂದು ಹೆಚ್ಚು ಲವಲವಿಕೆ. ಅವರು 'ಯಂಗ್ ಇಂಡಿಯಾ' ಪತ್ರಿಕೆಯ ಮೂಲಕ ಗಾಂಧೀಜಿಯವರ ಎಲ್ಲ ತತ್ವಗಳನ್ನೂ ಬಹು ಚೆನ್ನಾಗಿ ತಿಳಿದುಕೊಂಡಿದ್ದರು ಅವರೂ ಖಾದಿ ಭಕ್ತರಾಗಿದ್ದರು. ಪ್ರಾತಃಕಾಲದ ಭಜನೆಯ ಕಾಲಕ್ಕೆ ಹೆಚ್ಚು ಗಲಾಟೆಯಿರುವುದಿಲ್ಲವೆಂದು ಅವರನ್ನು ಒಂದು ದಿನ ಆ ಕಾಲದಲ್ಲಿ ಕರೆದುಕೊಂಡು ಹೋದೆನು. ಬಹು ಜನರಿಗೆ ಗಾಂಧೀಜಿಯವರ ದರ್ಶನದ ಕೊರತೆಯಾಯಿತು. ಆಗ ಒಂದು ವೀರಶೈವರ ಪರಿಷತ್ ಕೂಡಿಸಿ ಗಾಂಧೀಜಿಯವರನ್ನು ಅಲ್ಲಿಗೆ ಬರಮಾಡಿಕೊಂಡರೆ ಅನುಕೂಲವೆಂದು ಯೋಚಿಸಿ ಗಾಂಧೀಜಿಯವರಿಗೆ ಹೇಳಿಕೊಂಡೆನು. ಗಂಗಾಧರರಾಯರೇ ಕಾರ್ಯಕ್ರಮ ಗೊತ್ತು ಮಾಡುವವರೆಂದು ಅವರು ತಿಳಿಸಿದರು. ಆಗ ಶ್ರೀ ಗಂಗಾಧರರಾಯರಿಗೆ

ತಿಳಿಸಲು ಅವರು ಒಪ್ಪಿ ಆ ಪ್ರಕಾರ ವ್ಯವಸ್ಥೆ ಮಾಡಿಸಲು ಹೇಳಿದರು. ಸತ್ಯಾಗ್ರಹಿ ಬಸವೇಶ್ವರ ಎಂಬ ಹಿಂದಿ ಪುಸ್ತಕವನ್ನು ಆ ಮುಂಚೆಯೇ ನಾನು ಗಾಂಧೀಜಿಯವರಿಗೆ ಕೊಟ್ಟು ಖಾದಿಯು ನಮ್ಮ ಮತತತ್ವಗಳಲ್ಲಿಯೇ ಒಂದಾಗಿದೆಯೆಂಬುದನ್ನು ತಿಳಿಸಿದ್ದೆನು.

ಗಾಂಧೀಜಿಯವರನ್ನು ಕರೆದುಕೊಂಡು ಬರುವಾಗ ಸೌ. ಸರೋಜಿನಿ ದೇವಿಯವರಿಗೂ ಬರಲು ಅರಿಕೆಮಾಡಿಕೊಂಡೆನು. ಅವರೂ ಸಂತೋಷದಿಂದ ಸಿದ್ಧರಾದರು. ಸಭೆಗೆ ವಿಶೇಷವಾಗಿ ಜನರೂ ಬಂದರು. ಶ್ರೀಮಾನ್ ಪಾವಟೆ ಸಿದ್ದರಾಮಪ್ಪನವರು ಸ್ವಾಗತಪರ ಭಾಷಣ ಮಾಡಿದರು. ಗಾಂಧೀಜಿಯವರೂ ಸೌ. ಸರೋಜಿನಿದೇವಿಯವರೂ ಖಾದಿ ಪ್ರಸಾರದಬಗ್ಗೆ ವೀರಶೈವರಿಗೆ ಬೋಧನೆಮಾಡಿದರು." (ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ ಪು. ೨೫)

ನಾ.ಸು.ಹರ್ಡೀಕರರು ಅಖಿಲ ಭಾರತೀಯ ಸೇವಾದಳವನ್ನು ಸ್ಥಾಪಿಸಿ ಸ್ವಯಂ ಸೇವಕರಿಗೆ ತರಬೇತಿ ಕೊಟ್ಟು ಸಿದ್ಧ ಮಾಡಿದರು. ಇದರಿಂದ ಅತಿಥಿಗಳ ಆದರಾತಿಥ್ಯ ಅತ್ಯಂತ ಶ್ರೇಷ್ಠವಾಗಿತ್ತು. ಅಧಿವೇಶನದಲ್ಲಿ ಖಿಲಾಫತ್ ಚಳುವಳಿಯ ಪ್ರಸಿದ್ಧ ವ್ಯಕ್ತಿ ಮಹಮ್ಮದ ಅಲಿಯವರಿಂದ ಗಾಂಧೀಜಿ ಅಧಿಕಾರ ಗ್ರಹಣ ಮಾಡಿದರು. ಅಧಿವೇಶನದ ಶುಲ್ಕವನ್ನು ಗಾಂಧೀಜಿಗೆ ಒಪ್ಪಿಸುವ ನಿಯಮವಿತ್ತು. ಆದರೆ ಅದನ್ನು ಯಾವ ಅಧಿವೇಶನದಲ್ಲಿಯೂ ಕೊಟ್ಟಿರಲಿಲ್ಲ. ಬೆಳಗಾವಿ ಅಧಿವೇಶನದಲ್ಲಿ ಗಾಂಧೀಜಿ ಹೊರಡುವ ಮುನ್ನ ಗಂಗಾಧರರಾಯರು ಲೆಕ್ಕ ಒಪ್ಪಿಸಿದರು. ಅದರಿಂದ ಗಾಂಧೀಜಿಯವರಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಇಲ್ಲಿನ ಅಚ್ಚುಕಟ್ಟುತನ, ವೇಳೆಯ ಮಹತ್ವ ಎಲ್ಲವನ್ನೂ ಮುಕ್ತಕಂಠದಿಂದ ಗಾಂಧೀಜಿಯವರು ಹೊಗಳಿದರು.

## ಶಿವಬಸವ ಸ್ವಾಮೀಜಿ–ಗಾಂಧೀಜಿ

ನವೋದಯ ಗಾಳಿ ದೇಶದ ತುಂಬ ಬೀಸುತ್ತಿದ್ದಾಗ, ಗಾಂಧೀ ತತ್ವಜ್ಞಾನ–ಚಳವಳಿ ದೇಶವ್ಯಾಪಿ ಹರಡುತ್ತಿದ್ದಾಗ ಬೆಳಗಾವಿಯಲ್ಲಿ ಬಡಮಕ್ಕಳ ಹೊಟ್ಟೆಯನ್ನು ನೆತ್ತಿಯನ್ನು ನೋಡಿಕೊಳ್ಳುತ್ತಿದ್ದ ನಾಗನೂರು ರುದ್ರಾಕ್ಷಿಮಠದ ಪೂಜ್ಯ ಶ್ರೀ ಶಿವಬಸವ ಮಹಾಸ್ವಾಮಿಗಳು ದೇಶದ ಸ್ವಾತಂತ್ರ್ಯ ಚಳುವಳಿಗೂ ಧುಮುಕಿದರು. ಅವರ ಎಚ್ಚೆತ್ತ ಪ್ರಜ್ಞೆಗೆ ಯಾವುದೂ ಹೊರತಾಗಿ ಉಳಿಯಲಿಲ್ಲ. ಬೇರೆಯಾಗಿ



ಕಾಣಲಿಲ್ಲ. ೧೯೩೭ ರಲ್ಲಿ ಗಾಂಧೀಜಿ ಅವರು ಹುದಲಿಗೆ ಬಂದಾಗ ಸ್ವಾಮಿಗಳು ಭೇಟಿಯಾಗುತ್ತಾರೆ. ಇವರ ಜಾತ್ಯತೀತ ಮನೋಭಾವ, ಸ್ವಾತಂತ್ರ್ಯ ಪ್ರೀತಿ, ಶಿಕ್ಷಣ ಸೇವೆಯನ್ನು ಗಂಗಾಧರರಾವ ದೇಶಪಾಂಡೆಯವರಿಂದ ಕೇಳಿದ ಗಾಂಧೀಜಿ ತುಂಬ ಮೆಚ್ಚುಗೆಯಿಂದ ಮಾತಾಡುತ್ತಾರೆ. ಮತ್ತು 'ತಾವು ಗಿರಣಿ ಬಟ್ಟೆಗಳನ್ನು ಧರಿಸಬಾರದು, ಕೈಯಿಂದ ನೂತ ಖಾದಿ ಬಟ್ಟೆಗಳನ್ನು ಧರಿಸಬೇಕು' ಎಂದು ಸಲಹೆ ನೀಡುತ್ತಾರೆ. ಸ್ವಾಮಿಗಳು ಒಪ್ಪಿಕೊಳ್ಳುತ್ತಾರೆ. ಆಗಿನಿಂದ ಕಾವಿಬಣ್ಣದ ಖಾದಿ ಬಟ್ಟೆಗಳನ್ನೇ ತೊಡಲು ಪ್ರಾರಂಭಿಸುತ್ತಾರೆ. ಜೀವನ ಪರ್ಯಂತ ಗಾಂಧೀಜಿ ಮಾತನ್ನು ವ್ರತದಂತೆ ಪರಿಪಾಲಿಸುತ್ತಾರೆ.

ಸ್ವಾಮಿಗಳ ಸ್ವಾತಂತ್ರ್ಯ ಪ್ರೀತಿಯು ಸ್ವಾತಂತ್ರ್ಯ ಹೋರಾಟಗಾರರನ್ನು ಅವರ ಆಪ್ತವಲಯಕ್ಕೆ ಎಳೆದು ತರುತ್ತದೆ. ಬೆಳಗಾವಿ ಭಾಗದ ಚಳವಳಿಗಾರರಿಗೆ ಪ್ರಸಾದ ನಿಲಯ ಆಶ್ರಯ ತಾಣವಾಗುತ್ತದೆ. ವಾಲಿ ಚೆನ್ನಪ್ಪ, ಅಣ್ಣೂ ಗುರೂಜಿ ಮುಂತಾದವರು ಮೇಲಿಂದ ಮೇಲೆ ಸ್ವಾಮಿಗಳನ್ನು ಭೇಟಿಯಾಗುತ್ತಿದ್ದರು. ಚಲೇಜಾವ್ ಚಳವಳಿ ಕುರಿತು ಕಾರ್ಯಯೋಜನೆ ರೂಪಿಸುತ್ತಿದ್ದರು. ಪ್ರಸಾದ ನಿಲಯದಲ್ಲಿ ರಹಸ್ಯವಾಗಿ ನಡೆಯುತ್ತಿದ್ದ ಸಭೆಗಳಲ್ಲಿ ವಿದ್ಯಾರ್ಥಿಗಳೂ ಭಾಗವಹಿಸುತ್ತಿದ್ದರು. ಬೆಳಗಾವಿ ಜಿಲ್ಲೆಯಲ್ಲಿ ಭೂಗತ ಚಟುವಟಿಕೆಗಳು ತೀವ್ರಗೊಂಡಾಗ ಸ್ವಾಮಿಗಳು ಚಳುವಳಿಗಾರರಿಗೆ ಆಸರೆಯಾಗಿ ನಿಲ್ಲುತ್ತಾರೆ. ವಿದ್ಯಾರ್ಥಿಗಳಿಗೂ ಗೊತ್ತಾಗದ ರೀತಿಯಲ್ಲಿ ಅವರಿಗೆ ಊಟದ ಏರ್ಪಾಡು ಮಾಡುತ್ತಾರೆ. 'ರಾತ್ರಿ ಎಲ್ಲರೂ ಮಲಗಿದ ಮೇಲೆ ಸ್ವಾಮಿಗಳು ಅಡುಗೆಯ ಮನೆಗೆ ಬಂದು ಭಾರವಾದ ಅನ್ನದ ತಪ್ಪೇಲಿಯನ್ನು ಸಾರಿನ ಪಾತ್ರೆಯನ್ನು ಸ್ವತಃ ಹೊತ್ತು ಹಿತ್ತಲ ಬಾಗಿಲ ತೆರೆದು ಹೊರಗೆ ಇಟ್ಟು, ಬಾಗಿಲನ್ನು ಭದ್ರವಾಗಿ ಹಾಕಿ ಬಂದು ಮಲಗುತ್ತಿದ್ದರು. ರಾತ್ರಿ ಚಳುವಳಿಕಾರರು ಹಿತ್ತಿಲ ಬಾಗಿಲಕ್ಕೆ ಬಂದು ಅನ್ನ–ಸಾರು ಉಂಡು, ಇಲ್ಲವೇ ಕಟ್ಟಿಕೊಂಡು ಪಾತ್ರೆಗಳನ್ನು ಖಾಲಿ ಮಾಡಿ ಹೋಗುತ್ತಿದ್ದರು. ನಸುಕಿನಲ್ಲಿ ಸ್ವಾಮಿಗಳು ಎದ್ದು ಹಿತ್ತಿಲ ಬಾಗಿಲ ಕಡೆಗೆ ಹೋಗಿ, ಬಾಗಿಲು ತೆಗೆದು ಖಾಲಿಯಾದ ಪಾತ್ರೆಗಳನ್ನು ತೊಳೆಯುವ ಮನೆಯಲ್ಲಿ ಇಟ್ಟು ಹೋಗುತ್ತಿದ್ದರು. ಈ ಗುಪ್ತಕಾರ್ಯಗಳು ಹಲವಾರು ತಿಂಗಳುಗಳೇ ನಡೆದವು. ಬ್ರಿಟಿಷ್ ಸರಕಾರಿ ಸೇವೆಯಲ್ಲಿದ್ದ ಕೆಲವು ದೇಶಭಕ್ತರು ಮುಂದೆ ಬರುವ ಆತಂಕಗಳ ಬಗ್ಗೆ, ಸರಕಾರದ ಚಲನವಲನದ ಬಗ್ಗೆ, ಸ್ವಾಮಿಗಳಿಗೆ ಸುದ್ದಿ ಕಳುಹಿಸುತ್ತಿದ್ದರು. ಇದೆಲ್ಲ ಒಳ್ಳೆಯ ಶ್ರದ್ಧೆಯಿಂದ ಮುಂದುವರೆದಿತ್ತು.

ಕೊನೆಗೆ ಬ್ರಿಟಿಷ್ ಸರಕಾರದವರು ಸ್ವಾಮಿಗಳನ್ನೇ ಬಂಧಿಸಿದರೆ ಸರಿಯಾಗುವುದೆಂದು ಆದೇಶ ಹೊರಡಿಸಿದರು. ಈ ಗುಪ್ತ ವಿಷಯವು ಶಹಪೂರದ ಸುಪ್ರಸಿದ್ಧ ವಕೀಲರಾದ ಜಿಗಜಿನ್ನಿಯವರಿಗೆ ತಲುಪಿತು. ಮೊದಲಿನಿಂದಲೂ ಜಿಗಜಿನ್ನಿ ವಕೀಲರು ಸ್ವಾಮಿಗಳ ಅಭಿಮಾನಿಗಳು ಹಾಗು ಭಕ್ತರು. ಅವರು ತಕ್ಷಣ ಶಹಪೂರದಿಂದ ಬೆಳಗಾವಿಗೆ ಬಂದು, ಶ್ರೀಗಳವರಿಗೆ ತಿಳಿಸಿದರು. ಶ್ರೀಗಳು ಭೂಗತರಾಗಬೇಕೆಂದು ಸೂಚನೆ ಕೊಟ್ಟು ಆಗ್ರಹಿಸಿದರು. ಆಗ ಶಿವಬಸವ ಸ್ವಾಮಿಗಳು ತಡಮಾಡದೇ ಒಂದು ದೊಡ್ಡ ಕಂಬಳಿಯನ್ನು ಹೊದ್ದುಕೊಂಡು, ಪ್ರಸಾದ ನಿಲಯದ ಎಲ್ಲ ಜವಾಬ್ದಾರಿಯನ್ನು ಅಲ್ಲಿದ್ದ ಹಿರಿಯರಿಗೆ ಬಿಟ್ಟು, ಗದ್ದೆಗಳಲ್ಲಿ ಹಾಯ್ದು ರೇಲ್ವೆ ಹಳಿಗಳ ಬದಿಯಲ್ಲಿ ಬಂದರು. ಆಗ ಒಂದು ಗೂಡ್ಸ್ ರೈಲು ಗಾಡಿ ಘಟಪ್ರಭಾದ ಕಡೆಗೆ ಹೊರಟಿತು. ಏರು–ಇಳುವು–ತಿರುವುಗಳಲ್ಲಿ ಅದರ ವೇಗ ಹೇಳುವಷ್ಟಿರಲಿಲ್ಲ. ತಕ್ಷಣವೇ ಸ್ವಾಮಿಗಳು ಆ ರೈಲು ಗಾಡಿಯನ್ನು ಹತ್ತಿ ಕುಳಿತರು. ಅದು ಘಟಪ್ರಭಾ ಸ್ಟೇಷನ್ ಮುಟ್ಟಿತು. ಅಲ್ಲಿ ಇಳಿದು, ರಾತ್ರಿಯಾದ ಮೇಲೆ ಹುಬ್ಬಳ್ಳಿಯ ಕಡೆಗೆ ಹೊರಟಿದ್ದ ಒಂದು ಪ್ಯಾಸೆಂಜರ್ ಗಾಡಿಯ ಜನಸಂದಣಿಯಲ್ಲಿ ಸೇರಿ, ಕಂಬಳಿಯನ್ನು ಮುಖ ಕಾಣದ ಹಾಗೆ ಹೊದ್ದುಕೊಂಡು ಕುಳಿತರು. ರೈಲು ಬೆಳಗಾವಿ ಸ್ಟೇಶನ್ ತಲುಪಿತು. ತಮ್ಮ ಪರಿಚಯ ಇದ್ದವರು ಯಾರೂ ಕತ್ತಲಲ್ಲಿ ಕಾಣಲಿಲ್ಲ. ಹುಬ್ಬಳ್ಳಿ ಮಾರ್ಗವಾಗಿ ರೈಲು ಬ್ಯಾಡಗಿಗೆ ಬರುವಷ್ಟರಲ್ಲಿ ನಸುಕಾಗಿತ್ತು. ತಕ್ಷಣ ಇಳಿದವರೇ ಸಾಗರದ ಕಡೆಗೆ ಹೊರಟರು. ಸಾಗರದಿಂದ ಕೆಳದಿಯ ಮಠಕ್ಕೆ ತಲುಪಿದರು. ಕೆಳದಿ ಮಠ ಗದ್ದೆ, ಅರಣ್ಯಗಳಿಂದ ಸುತ್ತುವರಿದಿತ್ತು. ಅದಕ್ಕೆ ಜನಸಂಪರ್ಕ ಕಡಿಮೆಯಿತ್ತು. ಆ ಭಾಗದ ಜನರು ಇವರನ್ನು ಗುರುತಿಸಲೂ ಸಾಧ್ಯವಿಲ್ಲ. ಕೆಳದಿ ಸ್ವಾಮಿಗಳು ಇವರ ಸ್ನೇಹಿತರು. ಚಳವಳಿಯ ಉಗ್ರತೆ ಕಡಿಮೆ ಆಗುವವರೆಗೂ ಕೆಳದಿ ಮಠದಲ್ಲಿ ಉಳಿಯಬೇಕಾಯಿತು. ಕಾಂಗ್ರೆಸ್ ಸಂಸ್ಥೆ ೧೯೪೨ ರ ಪ್ರಾರಂಭದಲ್ಲಿ ಭೂಗತ ಕಾರ್ಯಕ್ರಮಗಳನ್ನು ನಿಲ್ಲಿಸುವಂತೆ ದೇಶಾದ್ಯಂತ ಸೂಚನೆ ಕಳುಹಿಸಿತು. ಎಲ್ಲ ಕಾರ್ಯಗಳು ನಿಂತವು. ಆಗ ಬ್ರಿಟಿಷ್ ಸರಕಾರ ಜನರನ್ನು ಬಂಧಿಸುವ ಕಾರ್ಯವನ್ನು ಸ್ಥಗಿತಗೊಳಿಸಿತು. ಎಲ್ಲ ಭೂಗತ ಜನರು ಒಬ್ಬೊಬ್ಬರಾಗಿ ಹೊರಬರಹತ್ತಿದ್ದರು. ಪೊಲೀಸರು ಅವರ ಮೇಲಿನ ಕೇಸುಗಳನ್ನು ವಜಾ ಮಾಡಿದರು. ಇದೆಲ್ಲ ತಿಳಿದುಕೊಂಡ ಶ್ರೀಗಳು ಕೆಳದಿಯ ಮಠಕ್ಕೆ ಕೃತಜ್ಞತೆ ಸೂಚಿಸಿ, ಬೆಳಗಾವಿಗೆ ಮರಳಿದರು. ಬ್ರಿಟಿಷ್ ಸರಕಾರವು ೧೯೪೭ ರ



ಆಗಸ್ಟ್ ಹದಿನೈದರಂದು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಮರಳಿತು. ಹೀಗೆ ರಾಷ್ಟ್ರೀಯ ಚಳುವಳಿಯಲ್ಲಿ ಹೋರಾಟಗಾರರಿಗೆ ನೆರವಾಗುವ ಮೂಲಕ, ತಾವೂ ನೇರವಾಗಿ ಪಾತ್ರವಹಿಸುವ ಮೂಲಕ ಶ್ರೀಗಳು, ಕೇವಲ ಒಂದು ಮಠದ ಸ್ವಾಮಿಯಾಗಿ ಉಳಿಯದೆ ರಾಷ್ಟ್ರೀಯ ಪ್ರಜ್ಞೆಗೆ ಅರ್ಥಪೂರ್ಣವಾಗಿ ಸ್ಪಂದಿಸಿದರು.

## ಗಾಂಧಿ ಸೇವಾ ಸಂಘದ ಸಮ್ಮೇಳನ ೧೯೩೭

ಹುದಲಿಯಲ್ಲಿ ಏಪ್ರಿಲ್ ೧೯೩೭ರಲ್ಲಿ ಗಾಂಧಿ ಸೇವಾ ಸಂಘದ ಮೂರನೇ ವಾರ್ಷಿಕ ಸಮ್ಮೇಳನ ಜರುಗಿತು. ಈ ಸಮ್ಮೇಳನಕ್ಕೆ ಸ್ವತಃ ಗಾಂಧೀಜಿಯವರೇ ಆಗಮಿಸಿ ಒಂದು ವಾರ ಇದ್ದರು.

ದಿನಾಂಕ ೧೬ ಏಪ್ರಿಲ್ ೧೯೩೭ರಿಂದ ೨೦ ಏಪ್ರಿಲ್ ೧೯೩೭ರವರೆಗೆ ಐದು ದಿನ ಗಾಂಧೀ ಸೇವಾ ಸಂಘದ ಸಮ್ಮೇಳನ ಅತ್ಯಂತ ವಿಧಾಯಕವಾಗಿ ಜರುಗಿತು. ಗಾಂಧೀಜಿ ಒಂದು ದಿನ ಮುಂಚಿತವಾಗಿಯೇ ಸುಲಧಾಳ ಸ್ಟೇಶನ್‌ವರೆಗೆ ರೈಲಿನಲ್ಲಿ ಬಂದು, ಅಲ್ಲಿಂದ ನಡೆದುಕೊಂಡು ಹುದಲಿಗೆ ಬಂದರು. ದಿನಾಂಕ ೧೬–೪–೧೯೩೭ರಂದು ಮಧ್ಯಾಹ್ನ ೩–೩೦ ಗಂಟೆಗೆ ಸಮ್ಮೇಳನ ಪ್ರಾರಂಭವಾಯಿತು. ಸ್ವಾಗತಾಧ್ಯಕ್ಷರಾದ ಗಂಗಾಧರರಾವ್ ದೇಶಪಾಂಡೆ ಅವರು ಸ್ವಾಗತ ಭಾಷಣ ಮಾಡಿದರು. ಸಂಘದ ಸೇವಾ ಚಟುವಟಿಕೆಗಳ ಕುರಿತು ವಿಸ್ತೃತವಾಗಿ ಹೇಳಿದರು. ಗೋರಕ್ಷಣೆ, ಸರ್ವಧರ್ಮ ಸಮನ್ವಯತೆ, ಶಾಸನ ಸಭೆಯಲ್ಲಿ ಗಾಂಧೀ ಸೇವಾ ಸಂಘ ಏನು ಮಾಡಬೇಕು ಮೊದಲಾದ ವಿಷಯ ಕುರಿತು ಗಾಂಧೀಜಿ ಸುದೀರ್ಘವಾಗಿ ಮಾತನಾಡಿದರು. ಎರಡನೇ ದಿನ ಮಳೆ ಬಂದ ಕಾರಣವಾಗಿ ಸಮ್ಮೇಳನ ಹಗಲಿನಲ್ಲಿ ನಡೆಯಲಿಲ್ಲ. ಮದುವೆಗಳು ನಡೆದವು. ಈ ಮದುವೆಗಳ ಉದ್ದೇಶ, ಬ್ರಹ್ಮಚರ್ಯ ನಿಷ್ಠೆ ಮುಂತಾದ ಗೃಹಸ್ಥಾಶ್ರಮದ ಆಚರಣೆಗಳ ಕುರಿತು ಗಾಂಧೀಜಿ ಉಪದೇಶ ನೀಡಿದರು. ನಾಲ್ಕನೆಯ ದಿನ ಸಮ್ಮೇಳನದಲ್ಲಿ ಕಾರ್ಯಕಾರಿ ಸಮಿತಿ ಸಭೆ ಜರುಗಿತು. ಬಹಿರಂಗ ಅಧಿವೇಶನವೂ ನಡೆಯಿತು. ಸೇವಾ ಸಂಘದ ಸದಸ್ಯರು ಮೊದಲು ಶಾಸನ ಸಭೆಯಲ್ಲಿ ಭಾಗವಹಿಸಬಾರದು ಎಂದು ನಿರ್ಧರಿಸಲಾಗಿತ್ತು. ಆದರೆ ಈ ಕಾರ್ಯಕಾರಿ ಸಮಿತಿಯಲ್ಲಿ ಕನಿಷ್ಠ ಇಬ್ಬರಾದರೂ ಸದಸ್ಯರು ಶಾಸನ ಸಭೆ ಪ್ರವೇಶಿಸಬೇಕೆಂದು ನಿರ್ಧರಿಸಲಾಯಿತು. ಅಧಿವೇಶನದ ಕೊನೆಯ ದಿನ ೨೦–೪–೧೯೩೭ರಂದು

ಶಾಸನಸಭಾ ಪ್ರವೇಶದ ನಿರ್ಣಯದ ಕುರಿತು ಸುದಿರ್ಘವಾಗಿ ಚರ್ಚಿಸಲಾಯಿತು. ಗಾಂಧೀಜಿಯವರು ಸಮಾರೋಪ ಭಾಷಣ ಮಾಡಿದರು.

ಹುದಲಿಯ ಈ ಸಮ್ಮೇಳನ ಇತಿಹಾಸದಲ್ಲಿ ಒಂದು ಅಚ್ಚಳಿಯದ ನೆನಪು ಉಳಿಸಿತು. ಗಾಂಧೀಜಿ ಅವರ ಘನ ವ್ಯಕ್ತಿತ್ವದ ದರ್ಶನ ಕನ್ನಡಿಗರಿಗೆ ಆಯಿತು.

**ವಿಶೇಷ ಘಟನೆಗಳು**

ಗಾಂಧೀಜಿಯವರು ಹುದಲಿಯಲ್ಲಿದ್ದಾಗ ಒಂದೆರಡು ಮಹತ್ವದ ಘಟನೆಗಳು ಜರುಗಿದವು. ಈ ಘಟನೆಗಳು ಗಾಂಧೀಜಿಯವರ ಘನ ವ್ಯಕ್ತಿತ್ವದ ದರ್ಶನವನ್ನು ಮಾಡಿಸುತ್ತವೆ. ಸರದಾರ ವೀರನಗೌಡರು ತಮ್ಮ ಪತ್ನಿ ನಾಗಮ್ಮ ಮತ್ತು ತಾವು ಹುಬ್ಬಳ್ಳಿಯಲ್ಲಿ ನಡೆಸುತ್ತಿದ್ದ ಹುಬ್ಬಳ್ಳಿ ಹರಿಜನ ಬಾಲಿಕಾಶ್ರಮದ ಹೆಣ್ಣುಮಕ್ಕಳನ್ನು ಕರೆದುಕೊಂಡು ಹುದಲಿಗೆ ಬಂದಿದ್ದರು. ವೀರನಗೌಡ ಮತ್ತು ನಾಗಮ್ಮ ದಂಪತಿಗಳಿಗೆ ಒಂದು ತಿಂಗಳ ಹಿಂದೆ ಹೆಣ್ಣು ಮಗುವೊಂದು ಜನಿಸಿತ್ತು. ಗಾಂಧೀಜಿಯವರಿಂದ ಈ ಮಗುವಿಗೆ ಹೆಸರಿಡಬೇಕೆಂಬುದು ವೀರನಗೌಡರ ಬಯಕೆ. ಗಾಂಧೀಜಿಯವರ ಮುಂದೆ ಮಗುವನ್ನು ಇಟ್ಟು, ಈ ಮಗುವಿಗೆ ಒಂದು ಹೆಸರಿಡಬೇಕೆಂದು ನಾಗಮ್ಮನವರು ಕೋರಿದರು. ಆಗ ವೀರನಗೌಡರು ಗಾಂಧೀಜಿಯವರಿಗೆ "ಈ ಮಗು ತನ್ನ ತಂದೆ ತಾಯಿಗಳ ಮನೋದೌರ್ಬಲ್ಯದ ಫಲ" ಎಂದರು. ಇದನ್ನು ಕೇಳಿದ ಗಾಂಧೀಜಿ ಹಾಗಾದರೆ ಈ ಮಗುವಿಗೆ "ಅಬಲಾ" ಎಂದು ಹೆಸರಿಡಿ ಎಂದರು. ಆಗ, ಅಲ್ಲಿದ್ದ ಮಹಿಳೆಯರು ಗಾಂಧೀಜಿಯವರ ಈ ಮಾತನ್ನು ವಿರೋಧಿಸಿದರು. ತಂದೆ ತಾಯಿಯರ ದೌರ್ಬಲ್ಯಕ್ಕೆ ಮಗು ಏಕೆ ಹೊಣೆ ಆಗಬೇಕು ಎಂಬುದು ಅವರ ವಾದವಾಗಿತ್ತು. ಈ ವಾದವನ್ನು ಒಪ್ಪಿದ ಗಾಂಧೀಜಿಯವರು ಅಬಲಾ ಹೆಸರಿನ ಕುಂದನ್ನು ತೊಡೆದು ಹಾಕಲು, "ಅಮಲಾ" ಎಂದು ಕೂಸಿಗೆ ನಾಮಕರಣ ಮಾಡಿದರು.

ಗಾಂಧೀಜಿ ಪುಂಡಲೀಕ ಕಾತಗಡೆ ಅವರೊಂದಿಗೆ ಕುಮರಿ ಆಶ್ರಮದಿಂದ ವಾಯುವಿಹಾರಕ್ಕೆ ಹೊರಟಿದ್ದರು. ಆಗ ಎದುರಿಗೆ ಒಬ್ಬ ವ್ಯಕ್ತಿ ಬರುವುದನ್ನು ನೋಡಿ ಗಾಂಧೀಜಿ, ಪುಂಡಲೀಕ ಅವರಿಗೆ "ಇವರು ಯಾರು?" ಎಂದು ಕೇಳಿದರು. "ಅವರು ಶ್ರೀಶೈಲಪ್ಪ ಕಾಗತಿಕರ, ಸಮಾಜ ಸೇವೆಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ" ಎಂದರು. ಶ್ರೀಶೈಲಪ್ಪ ಕಾಗತಿಕರ ಬರುತ್ತಿರುವ ಧೋರಣೆ ನೋಡಿ ಗಾಂಧೀಜಿ ಪುಂಡಲೀಕ ಕಾತಗಡೆ ಅವರಿಗೆ "ಇವರು ನನ್ನ ಹತ್ತಿರ ಬಂದು, ನನ್ನ ಕಾಲಿಗೆ ನಮಸ್ಕರಿಸುವ ಹಾಗೆ ಕಾಣುತ್ತದೆ, ಅದನ್ನು ಹೇಗಾದರೂ ನೀವು ತಡೆಯಬೇಕು" ಎನ್ನುತ್ತಾರೆ. ಆದರೆ ಅಷ್ಟರಲ್ಲಿ ಶ್ರೀಶೈಲಪ್ಪನವರು ಗಾಂಧೀಜಿಯವರ ಸಮೀಪಕ್ಕೆ ಬಂದು ನಮಸ್ಕರಿಸುತ್ತಾರೆ. ಈ ಘಟನೆ, ಗಾಂಧೀಜಿಯವರಿಗೆ ಸುಪ್ತವಾಗಿದ್ದ ಆರನೆಯ ಇಂದ್ರಿಯ ಜಾಗೃತವಾಗಿತ್ತು ಎಂಬುದನ್ನು ತೋರಿಸುತ್ತದೆ.



ಈ ಸಮ್ಮೇಳನದ ಮೂರನೆಯ ದಿನ ಮಳೆ ಇರುವ ಕಾರಣ ಹಗಲಿನಲ್ಲಿ ಸಮ್ಮೇಳನ ನಡೆಸುವುದು ಆಗಲಿಲ್ಲ. ಸರದಾರ ವಲ್ಲಭಭಾಯಿ ಪಟೇಲ, ಬಾಬು ರಾಜೇಂದ್ರ ಪ್ರಸಾದ ಮೊದಲಾದವರು ಇಲ್ಲಿಯೇ ಉಳಿದು ಕೊಂಡಿದ್ದರು. ಹೀಗಾಗಿ ಬೆಳಗಿನ ಸಮಯದಲ್ಲಿ ಕುಮರಿ ಆಶ್ರಮದಲ್ಲಿ ಎರಡು ಉಪನಯನ ಮತ್ತು ಎರಡು ಮದುವೆಗಳು ಜರುಗಿದ್ದು ವಿಶೇಷ. ಗಾಂಧೀಜಿಯವರ ಮೊಮ್ಮಗಳು ಮನುಗಾಂಧೀ ಅವರ ಮದುವೆ ಕಿಶೋರಲಾಲ ಮಶ್ರವಾಲರ ಅಣ್ಣನ ಮಗನೊಂದಿಗೆ ಆದರೆ, ಮಹಾದೇವ ದೇಸಾಯಿ ಅವರ ತಂಗಿ ನಿರ್ಮಲ ದೇಸಾಯಿ ಅವರ ಮದುವೆ ಈಶ್ವರ ದಾಸ ಎಂಬುವರೊಂದಿಗೆ ಜರುಗಿತು. ಇದೇ ಸಂದರ್ಭದಲ್ಲಿ ಮಹಾದೇವ ದೇಸಾಯಿ ಅವರ ಮಗ ನಾರಾಯಣ ದೇಸಾಯಿ ಅವರ ಮುಂಜಿ ಕೂಡ ನಡೆಯಿತು. ತರ್ಕತೀರ್ಥ ಲಕ್ಷ್ಮಣಶಾಸ್ತ್ರಿಗಳು ಮತ್ತು ಅವರ ಸಹಾಯಕರು ಶುದ್ಧವೈದಿಕ ಪದ್ಧತಿಯಲ್ಲಿ ಇವುಗಳನ್ನು ಸಾಂಗವಾಗಿ ನೆರವೇರಿಸಿಕೊಟ್ಟರು. ಪುರೋಹಿತರು ಸಂಸ್ಕೃತದಲ್ಲಿ ಮಂತ್ರಗಳನ್ನು ಹೇಳಿದರು. ಆಗ ಗಾಂಧೀಜಿ ಸಂಸ್ಕೃತದಲ್ಲಿ ಮಂತ್ರಗಳ ಪಠಣ ಮಾಡುವುದರಿಂದ ಅವುಗಳ ನಿಜವಾದ ಅರ್ಥ ಸ್ಥಳೀಯರಿಗೆ ತಿಳಿಯುವುದಿಲ್ಲ. ಆದ್ದರಿಂದ ಮಂತ್ರಗಳ ಮಹತ್ವವನ್ನು ಪ್ರಾಂತ್ಯ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿಯೇ ಹೇಳಿದರೆ ಅವರಿಗೆಲ್ಲ ಅರ್ಥವಾಗುತ್ತದೆ ಎಂದು ಸೂಚಿಸಿ ಅರ್ಧ ಗಂಟೆಗಳ ಕಾಲ ಈ ಮಂತ್ರಗಳ ಮಹತ್ವವನ್ನು ಕುರಿತು ವಧುವರರಿಗೆ ತಮ್ಮ ಭಾಷೆಯಲ್ಲಿ ತಿಳಿಸಿ ಹೇಳುವ ಪ್ರಯತ್ನ ಮಾಡಿದರು. ಗಾಂಧೀಜಿಯವರು ಪ್ರಾದೇಶಿಕ ಭಾಷೆಗಳ ಬಗ್ಗೆ ತುಂಬ ಗೌರವವನ್ನು ಇಟ್ಟುಕೊಂಡಿದ್ದರು ಎಂಬುದು ಈ ಘಟನೆ ನಮಗೆ ತಿಳಿಸುತ್ತದೆ.

ಗಾಂಧೀಜಿಯವರಿಗೆ ಆಡಿನ ಹಾಲು ತುಂಬ ಪ್ರಿಯವಾಗಿತ್ತು. ಅವರಿಗೆ ಪ್ರತಿನಿತ್ಯ ಆಡಿನ ಹಾಲನ್ನು ಕೊಡುವ ಕೆಲಸವನ್ನು ಕುಂದರನಾಡ ಪಾಟೀಲರ ತಂದೆ ಚನ್ನಬಸಪ್ಪ ಗೌಡ ಅವರು ಮಾಡಿದರು.

ಸಮ್ಮೇಳನ ನಡೆಯುವ ಸಂದರ್ಭದಲ್ಲಿ ವಿಪರೀತ ಮಳೆಯಾಗಿ ಅನುಭವಿಸಿದ ಆತಂಕ, ಗಾಂಧೀಸೇವಾ ಸಂಘದ ಕಾರ್ಯಕರ್ತರ ಸೇವಾನಿಷ್ಠೆ ಗಾಂಧೀಜಿಯವರ ಗಮನ ಸೆಳೆಯುವಂತಾಯಿತು. ಸಮ್ಮೇಳನಕ್ಕೆ ಬರುವ ಅತಿಥಿಗಳಿಗಾಗಿ ಜೋಳದ ದಂಟಿನ ಗುಡಿಸಲುಗಳನ್ನು ಹುದಲಿಯ ಲಿಂಗಾಯತ ರೈತರೆಲ್ಲ ಕೂಡಿ ಕಟ್ಟಿದ್ದರು. ಆದರೆ ಮಳೆ ಬಂದ ಪರಿಣಾಮವಾಗಿ ಕೆಲವು ಗುಡಿಸಲುಗಳು ಮುರಿದು ಬಿದ್ದವು. ಸಮ್ಮೇಳನಕ್ಕೆ ಬಂದ ಸಾವಿರಾರು ಕಾರ್ಯಕರ್ತರಿಗೆ ವ್ಯವಸ್ಥೆ ಮಾಡುವುದು ಸೇವಾಸಂಘದ ಕಾರ್ಯಕರ್ತರಿಗೆ ಸ್ವಲ್ಪ ಕಷ್ಟವೇ ಆಯಿತು. ಗಾಂಧೀಜಿ ಮತ್ತು ಕೆಲವು ಮುಖಂಡರನ್ನು ಕುಮರಿಗೆ ಕಾಲ್ನಡಿಗೆಯಲ್ಲಿಯೇ ಕರೆದುಕೊಂಡು ಹೋಗಬೇಕಾಯಿತು. ಮಳೆಯ ಪರಿಣಾಮ ವಿಪರೀತ ರಾಡಿಯಾಗಿತ್ತು. ಇಂತಹ ಹುದಲಿನಲ್ಲಿಯೇ ಗಾಂಧೀಜಿ ಕುಮರಿಗೆ ನಡೆದುಕೊಂಡು ಬಂದುದು ವಿಶೇಷವಾಗಿತ್ತು. ಉಳಿದ ಅತಿಥಿಗಳಿಗೆ ಊರಿನ ಜನರು ಆಶ್ರಯ ನೀಡಿದರು.

ಇವು ಸಮ್ಮೇಳನದ ಕೆಲವು ವಿಶೇಷತೆಗಳಾಗಿದ್ದವು. ಗಾಂಧೀಜಿ ಅವರು ಎಂತಹ ಪರಿಸ್ಥಿತಿಯಲ್ಲಿಯೂ ಹೊಂದಿಕೊಂಡು ಹೋಗುವ ಗುಣದವರಾಗಿದ್ದರು. ಹೀಗಾಗಿ ಅವರು ಇಡೀ ಭಾರತದ ಜನರ ಮನಸ್ಸನ್ನು ಗೆಲ್ಲುವಂತಾಯಿತು ಎಂಬುದು ಗಮನಿಸುವ ಅಂಶವಾಗಿದೆ.

## ಹುದಲಿ ಪರಿಸರದ ಪ್ರಮುಖ ಹೋರಾಟಗಾರರು:

ಹುದಲಿ ಪರಿಸರದಲ್ಲಿ ಗಂಗಾಧರರಾವ್ ದೇಶಪಾಂಡೆ ಅವರೊಂದಿಗೆ ಕೆಲವರು ಅತ್ಯಂತ ಶ್ರದ್ಧೆ ನಿಷ್ಠೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಕಾಲಗರ್ಭದಲ್ಲಿ ಅವರ ಹೆಸರುಗಳು ಮರೆತು ಹೋಗಿದ್ದವು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ವಿಷಯ ಕುರಿತು ನನ್ನ ಗಮನ ಸೆಳೆದವರು ಸುಲಧಾಳದ ಶ್ರೀ ರಾಯನಗೌಡ ಪಾಟೀಲ ಅವರು. ಅವರ ನೆನಪಿನ ಗಣಿಯಲ್ಲಿದ್ದ ಕೆಲವು ಹೋರಾಟಗಾರರ ಹೋರಾಟದ ಮಧುರ ನೆನಪುಗಳನ್ನು ಇಲ್ಲಿ ಕೊಟ್ಟಿರುವೆ.



## ಬಡಸದ ಬಸನಗೌಡರು

ಬಡಸದ ಬಸನಗೌಡರು ಬೆಳಗಾವಿ ತಾಲೂಕಿನ ಹಿರೇಬಾಗೆವಾಡಿ ಹತ್ತಿರದ ಬಡಸ ಗ್ರಾಮದವರು. ತಾಯಿಯ ತವರೂರು ಬೆಳಗಾವಿ ತಾಲೂಕಿನ ಕುಂದರನಾಡಿನ ಹುದಲಿ ಬಸನಗೌಡರು ಹುಟ್ಟಿನಿಂದ ಸಾಮಾಜಿಕ ಚಟುವಟಿಕೆಗಳನ್ನು ಪೂರೈಸುವವರೆಗೆ ಹುದಲಿಯಲ್ಲಿರುತ್ತಾರೆ. ಹುದಲಿ ಭಾಗದ ಜನರಿಗೆ ಬಡಸದ ಬಸನಗೌಡರಾಗಿ ಬಡಸದ ಜನರಿಗೆ ಹುದಲಿಯ ಬಸನಗೌಡರಾಗಿ ತಮ್ಮ ನಿಷ್ಕಾಮ ಸಾಮಾಜಿಕ ಕಾರ್ಯಗಳಿಂದ ಗುರುತಿಸಿಕೊಳ್ಳುತ್ತಾರೆ.

ಬಸನಗೌಡರು ಬಡಸದಲ್ಲಿ ೧೯೧೫ರಲ್ಲಿ ಜನಿಸಿದರು. ತಂದೆ ರುದ್ರಗೌಡ ಬಡಸದ ಗೌಡರಾಗಿದ್ದು, ದೊಡ್ಡರೈತರು ತಾಯಿ ನೀಲಗಂಗಮ್ಮ. ಬಸನಗೌಡ ತಾಯಿಯ ಮನೆಯಲ್ಲಿ ಅಜ್ಜ ಅಜ್ಜಿಯರ ಪ್ರೀತಿಯ ಕಂದನಾಗಿ ಹುದಲಿಯಲ್ಲಿಯೇ ಬೆಳೆಯುತ್ತಾರೆ. ಬೆಳೆಯುವ ಸಿರಿ ಮೊಳಕೆಯಲ್ಲಿಯಂತೆ ಚಿಕ್ಕಂದಿನಲ್ಲಿಯೇ ಬಸನಗೌಡರು ಪಾದರಸದಂತೆ ಚುರುಕು. ಇವರು ವಿದ್ಯೆಯಲ್ಲಿ ಜಾಣರಾಗಿದ್ದರೂ ಓದಿದ್ದು ಮಾತ್ರ ಮುಲ್ಕಿ ಮಾತ್ರ. ಹುದಲಿ ದೇಶದ ಸ್ವಾತಂತ್ರ್ಯ ಚಳುವಳಿಯ ನಕ್ಷೆಯಲ್ಲಿ ಮಿನುಗುತ್ತಿರುವ ನಕ್ಷತ್ರ. ಬಾಲಕನಾದ ಬಸನಗೌಡರಿಗೆ ಚಿಕ್ಕವನಿದ್ದಾಗಲೆ ಊರಿನಲ್ಲಿ ನಡೆಯುವ ಸ್ವಾತಂತ್ರ್ಯ ಚಳುವಳಿಯ ಪ್ರಭಾತ ಫೇರಿ, ಮೆರವಣಿಗೆಗಳಿಂದ ಸ್ಪೂರ್ತಿ. ಗೆಳೆಯ ತಿಪ್ಪಣ್ಣ ಬೆಟಗೇರಿ ಸ್ವಾತಂತ್ರ್ಯ ಸೇನಾನಿ ರಾಮಚಂದ್ರ ವಡವಿಯವರು ಬಸನಗೌಡರಿಗೆ ಸ್ವಾತಂತ್ರ್ಯದ ದೀಕ್ಷೆ ನೀಡಿ ಸಮಾಜ ಸೇವೆಯತ್ತ ಪ್ರೇರೇಪಿಸುತ್ತಾರೆ. ಕಟ್ಟುಮಸ್ತಾದ ಆಳು, ಮಂಡಲೀಕಜೀ ಅವರು ವ್ಯಾಯಾಮದಲ್ಲಿ ವಿಶೇಷ ತರಬೇತಿ ಪಡೆಯಲು ಮಿರಜ ಮತ್ತು ಅಮರಾವತಿಗೆ ಕಳಿಸಿದರು. ಕುಸ್ತಿಯ ಜೊತೆ ಜೊತೆಗೆ ಲೇಝಿಮ್, ಲಾಠಿ ಆಟಗಳಲ್ಲಿ ಬ್ಯಾಂಡ್‌ಸೆಟ್ ಬಾರಿಸುವದರಲ್ಲಿ ತರಬೇತಿ ಪಡೆಯುತ್ತಾರೆ.

ಹುದಲಿಯಲ್ಲಿ ೨೦ ತರುಣ ಗೆಳೆಯರನ್ನು ಕೂಡಿಕೊಂಡು ೧೯೩೫ರಲ್ಲಿ ತರುಣ ಸಂಘ ಸ್ಥಾಪಿಸುತ್ತಾರೆ. ಲೇಝಿಮ್, ಲಾಠಿ, ಆಟಗಳು ಮತ್ತು ಬ್ಯಾಂಡ್‌ಸೆಟ್ ಬಾರಿಸುವದರಿಂದ ತರುಣರ ಒಲವು ಬಸನಗೌಡರತ್ತ ವಾಲುತ್ತದೆ. ಸುತ್ತ ಮುತ್ತಲಿನ ಯುವಕರು ಇವರತ್ತ ಆಕರ್ಷಿತಗೊಳ್ಳುತ್ತಾರೆ.

ಇವರ ತರುಣ ಸಂಘಕ್ಕೆ ರಾಮಚಂದ್ರ ವಡವಿಯವರು ವಿಧಾಯಕ ಕಾರ್ಯ ಮಾಡಲು ಪ್ರೇರೇಪಿಸುತ್ತಾರೆ. ಬಸನಗೌಡರ ಜನಪರ ಕಾರ್ಯಗಳಿಂದ ನಾಯಕರಾಗಿ ಹೊರ ಹೊಮ್ಮುತ್ತಾರೆ. ೧೯೩೭ರಲ್ಲಿ ಹುದಲಿಯಲ್ಲಿ ಗಾಂಧಿ ಸೇವಾ ಸಂಘದ ವತಿಯಿಂದ ಖಾದಿ ಸಮ್ಮೇಳನ ಜರುಗಿದಾಗ ದೇಶದ ಎಲ್ಲ ನಾಯಕರು ಹುದಲಿಗೆ ಆಗಮಿಸಿರುತ್ತಾರೆ. ಬಸನಗೌಡರ ತರುಣ ಸಂಘ ಸ್ವಯಂ ಸೇವಕರು ಕಾರ್ಯ ನಿರ್ವಹಿಸುತ್ತಾರೆ. ಸ್ವತಃ ಬಸನಗೌಡರು ಮಹಾತ್ಮ ಗಾಂಧೀಜಿಯವರ ಕುಟೀರದ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸುತ್ತಾರೆ. ಈ ಸಮ್ಮೇಳನದಲ್ಲಿ ಕರ್ನಾಟಕ ಹಿರಿಯ ನಾಯಕರಾದ ಕೆ. ಎಫ್. ಪಾಟೀಲರಂಥವರ ಸಂಪರ್ಕ ದೊರೆಯುತ್ತದೆ. ಬಸನಗೌಡರಿಗೆ ಖಾದಿ ಸಮ್ಮೇಳನದಿಂದ ಸ್ವಾತಂತ್ರ್ಯ ಮತ್ತು ಸಾರ್ವಜನಿಕ ಸೇವೆಗಳ ಬಗೆಗೆ ಉತ್ಕಟತೆಯುಂಟಾಯಿತು. ಮಹಾತ್ಮ ಗಾಂಧೀಜಿಯವರ ಪ್ರಭಾವದಿಂದ ತಮ್ಮ ಜೀವನದಲ್ಲಿ ಸರಳತೆಯನ್ನು ಅಳವಡಿಸಿಕೊಂಡರು. ಸರಳತೆಯ ಬಗೆಗೆ ಮಾತಿಗಿಂತ ಕೃತಿ ಲೇಸು ಎಂದು ತಮ್ಮ ಸಹೋದರಮಾವ ಹುದಲಿಯ ಪೊಲೀಸ ಪಾಟೀಲರಾದ ಬಸನಗೌಡರ ಮಗಳಾದ ಶಿವಕಾಂತವ್ವಳ ಜೊತೆ ೧೯೪೧ರಲ್ಲಿ ಯಾವುದೇ ಆಡಂಬರವಿಲ್ಲದೆ ಸರಳ ಮದುವೆಯಾಗಿ ನವ ತರುಣರಿಗೆ ಮಾರ್ಗದರ್ಶಿಯಾದರು.

ಮಹಾತ್ಮಾ ಗಾಂಧೀಜಿಯವರು ೧೯೪೨ ಆಗಸ್ಟ್ ೯ರಂದು ಮುಂಬೈಯಲ್ಲಿ ಬ್ರಿಟಿಷರನ್ನು ಭಾರತ ಬಿಟ್ಟು ತೊಲಗಿಸಲು 'ಮಾಡು ಇಲ್ಲವೆ ಮಡಿ' ಉಗ್ರ ಮಂತ್ರ ಘೋಷಿಸುತ್ತಾರೆ. ಸಾಗರೋಪಾದಿಯಲ್ಲಿ ಜನ ಕೊನೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾಗಿದ್ದರು. ರಾಮಚಂದ್ರ ವಡವಿಯವರ ಭೂಗತರಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಹುದಲಿಯಲ್ಲಿ ಪ್ರಭಾತ ಫೇರಿ ಮಾಡಬೇಕೆಂದು ತಿರ್ಮಾನಿಸಿದರು. ಯಾರು ನೇತೃತ್ವ ವಹಿಸಬೇಕೆಂದು ವಿಚಾರ ವಿನಿಮಯದಲ್ಲಿ ಬಸನಗೌಡರು ತರುಣರಾಗಿದ್ದಾರೆ ಅವರೇ ನೇತೃತ್ವ ವಹಿಸಬೇಕೆಂದು ತಿರ್ಮಾನಿಸಿದರು. ಪ್ರಭಾತ ಫೇರಿ ದಿವಸ ಹುದಲಿಯಲ್ಲಿ ಪೋಲೀಸರ ಸರ್ಪಗಾವಲು, ಇವರು ಪ್ರಭಾತ ಫೇರಿಯನ್ನು ಅಚ್ಚು ಕಟ್ಟಾಗಿ ಹುದಲಿಯಲ್ಲಿ ಆಯೋಜಿಸಲು ಕಾರಣ ಇವರ ಸೇವಾದಳವಿತ್ತು. ಬಸನಗೌಡರು ಸೇವಾದಳ ನಾಯಕರಾಗಿದ್ದರು. ಜನ ಪೋಲಿಸರ ವಿರೋಧವನ್ನು ಲೆಕ್ಕಿಸದೆ ಮೆರವಣಿಗೆಯಲ್ಲಿ ಪಾಲ್ಗೊಂಡು ಧ್ವಜವಂದನೆ ಮಾಡಿದರು. ಶಾಂತ ರೀತಿಯಿಂದ ಸಭೆ ಮುಗಿಯಿತು.



ನಾಯಕರು ಬಸನಗೌಡರಲ್ಲಿ ನಾಯಕತ್ವದ ಗುಣ ಕಂಡುಕೊಂಡರು. ಬಿ. ಆರ್. ಪಾಟೀಲರು ಹುದಲಿಯ ಪೋಲೀಸ ಪಾಟೀಲರ ಸೋದರಳಿಯರೆಂದು ತಿಳಿದು ಪೋಲೀಸರು ಹುದಲಿಯ ಪೋಲೀಸ ಪಾಟೀಲರ ಮೇಲೆ ಸಂಶಯ ಮಾಡತೊಡಗಿತು. ಹುದಲಿಯ ಗೌಡರು ರಾಷ್ಟ್ರೀಯ ಪ್ರವೃತ್ತಿಯವರಾಗಿದ್ದರು. ಸರಕಾರದ ಅವಶ್ಯಕ ಕೆಲಸಗಳನ್ನಷ್ಟೆ ಮಾಡುತ್ತಿದ್ದರು. ಮೊದಲನೆಯ ಪ್ರಭಾತ ಫೇರಿಯಿಂದ ಉತ್ಸಾಹಿತರಾದ ಬಸನಗೌಡರು ಇನ್ನು ಹೆಚ್ಚಾಗಿ ತರುಣರ ಸಂಘಟನೆಯಲ್ಲಿ ತೊಡಗಿದರು.

೧೯೪೨ ಆಗಸ್ಟ್ ೯ರಂದು ಗಾಂಧೀಜಿಯವರು ದೇಶದ ಸ್ವಾತಂತ್ರ್ಯ ಗಳಿಸಲು 'ಮಾಡು ಇಲ್ಲವೆ ಮಡಿ' ಎಂದು ಕರೆಕೊಟ್ಟರು ದೇಶದ ತುಂಬೆಲ್ಲಾ ಚಳುವಳಿಗಳು ವಿಧ್ವಂಸಕ ಕೃತ್ಯಗಳು ಜರುಗತೊಡಗಿದವು ಯುವ ಜನಾಂಗ ಶಾಲೆ ಕಾಲೇಜಗಳನ್ನು ತೊರೆದರು. ಇತ್ತ ಕುಂದರನಾಡಿನಲ್ಲಿ ವಡವೀಜಿ ಭೂಗತರಾಗಿ ಬಿ. ಆರ್. ಪಾಟೀಲರ ನೇತೃತ್ವದಲ್ಲಿ ವಿಧ್ವಂಸಕ ಚಟುವಟಿಕೆಗಳನ್ನು ಪ್ರಾರಂಭಿಸಿದರು. ಬಸನಗೌಡರು ಮತ್ತು ವಾಸು ತಮ್ಮ ತಂಡ ಜೊತೆಗೆ ಕಾಳರಾತ್ರಿಯಲ್ಲಿ ಸುಲಧಾಳ, ಸುಳೆಭಾವಿ ರೈಲು ನಿಲ್ದಾಣಗಳ ನಡುವೆ ಟೆಲಿಫೋನ್ ತಂತಿ ಕಡಿದು ಕಂಬಗಳನ್ನು ಕಡಿದು ಫರಾರಿಯಾದರು, ಪೋಲೀಸರು ಇವರನ್ನು ಶೋಧ ಮಾಡತೊಡಗಿದರು. ಮತ್ತೊಂದು ಸಲ ರಾತ್ರಿ ಸಮಯ ಸಾಧಿಸಿ ಹಾರಿ ಗುದ್ದಲಿಗಳಿಂದ ರೈಲು ಕಂಬಿ ಕಿತ್ತರು. ಇವರ ತಂಡದ ಸೇನಾನಿಗಳು ಯಾವ ಕೆಲಸಕ್ಕೂ ಸಿದ್ಧರಾಗಿದ್ದರು. ಬಸನಗೌಡರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಲಿಲ್ಲ ಹುದಲಿಯ ಗೌಡರು ಇವರಮಾವನಾಗಿರುವುದರಿಂದ ಗೌಡರ ಮೇಲೆ ವಿಶ್ವಾಸವಿರಲಿಲ್ಲ. ಅದಕ್ಕಾಗಿ ಗುಜನಾಳದಲ್ಲಿ ಒಂದು ಪೋಲೀಸ ಸಶಸ್ತ್ರ ಪಡೆ ನಿಯೋಜಿಸಿದರು.

ಬೆಳಗಾವಿಯ ಮಿಲಿಟರಿ ಆಫೀಸಿನ ಎದುರಿಗೆ ಮುಂಜಾನೆ ಟಪಾಲು ಹೋಗುತ್ತಿತ್ತು. ಐಪಾಲು ಲೂಟಿ ಮಾಡುವ ಯೋಜನೆ ಹಾಕಿದರು ಬಸನಗೌಡರು ಪೋಸ್ಟಮನ್ ಸೈಕಲ್‌ಗೆ ತಮ್ಮ ಸೈಕಲ್ಲಿನಿಂದ ಡಿಕ್ಕಿ ಹೊಡೆದು ಕೆಡವಿ ಜೊತೆಗಾರನೊಂದಿಗೆ ಹಗಲಿನಲ್ಲಿಯೆ ಟಪಾಲು ಲೂಟಿ ಮಾಡಿದರು. ಅಣ್ಣಾವರ ಬ್ಯಾಂಕ್ ಲೂಟಿ ಮಾಡಿದಾಗ ಬಂಗಾರ ಸಿಗುತ್ತದೆ. ಬಂಗಾರವನ್ನು ಮಾಲೀಕರಿಗೆ ಮುಟ್ಟಿಸಿ ಪ್ರಾಮಾಣಿಕತೆ ಮೆರೆದರು. ತೊಲಗಿಯಲ್ಲಿ ಕಂದಾಯ ಇಲಾಖೆಯ

ಜಮಾಬಂಧಿ ನಡೆದಿತ್ತು. ಇವರ ತಂಡ ಲೂಟಿ ಮಾಡುವ ಸಂಚು ಹೂಡಿತು. ಪೋಲೀಸ ಕಾವಲಿನಲ್ಲಿದ್ದ ಹಣವನ್ನು ಕೀಳಲು ಹಿಂದಿನಿಂದ ಪೊಲೀಸನನ್ನು ಬಸನಗೌಡರು ತೆಕ್ಕೆ ಹಾಯ್ದು ಬಿಗಿಯಾಗಿ ಹಿಡಿದರು. ಇಬ್ಬರ ಗುದುಮುರುಗೆಯಲ್ಲಿ ಪೊಲೀಸನ ಕೈಯಲ್ಲಿಯ ಬಂದೂಕಿನ ಗುಂಡು ಹಾರಿತು ಗೌಡರ ಕೈಯಲ್ಲಿ ಗೋಳಿ ಸೇರಿತು. ಅಷ್ಟರಲ್ಲಿಯೆ ಇವರ ತಂಡ ಹಪ್ತೆ ಲೂಟಿ ಮಾಡಿತ್ತು. ರಕ್ತ ಸೋರುತ್ತಲೆ ಗೌಡರು ತಂಡದೊಂದಿಗೆ ಓಡಿದರು.

ಕುಂದರನಾಡಿನ ಸ್ವಾತಂತ್ರ್ಯ ಯೋಧರಿಗೆ ಕುಮರಿ ಆಶ್ರಮವು ತರಬೇತಿ ಕೇಂದ್ರವು ಹೌದು, ಅಡಗುದಾಣವೂ ಹೌದು. ಕುಮರಿ ಆಶ್ರಮ ಬಳ್ಳಾರಿ ಹಳ್ಳದ ಪಕ್ಕದಲ್ಲಿಯಿದೆ. ಆಶ್ರಮದ ದಕ್ಷಿಣ ಗುಡ್ಡಗಳು ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದವು ಆಶ್ರಮದ ಉತ್ತರಕ್ಕೆ ಬಳ್ಳಾರಿ ಹಳ್ಳ ಮತ್ತು ದಟ್ಟವಾದ ಗುಡ್ಡಗಳು ಪೋಲೀಸರು ಆಶ್ರಮದ ಮೇಲೆ ದಾಳಿ ಮಾಡಿದರೆ ಸ್ವಾತಂತ್ರ್ಯ ಯೋಧರು ದಕ್ಷಿಣ ಗುಡ್ಡದತ್ತ ಓಡಿದರೆ ಆ ಗುಡ್ಡಗಳು ಸಾಂಗ್ಲಿ ಸಂಸ್ಥಾನಕ್ಕೆ ಸೇರಿದ್ದವು ಅಲ್ಲಿ ಪೋಲೀಸರು ಹೋಗುವ ಹಾಗಿಲ್ಲ ಉತ್ತರಕ್ಕೆ ಬಳ್ಳಾರಿ ಹಳ್ಳ ದಟ್ಟ ಗುಡ್ಡಗಳು ಅಲ್ಲಿಯೂ ಪೋಲೀಸರಿಗೆ ಕಷ್ಟವಾಗುತ್ತಿತ್ತು. ವಡವಿಜೀ ಮತ್ತು ಬಸನಗೌಡರ ತಂಡ ಹುದಲಿಯಿಂದ ೩ ಮೈಲಿ ದೂರವಿರುವ ರಂಗಧೋಳಿಯ ತೋಟದಲ್ಲಿ ಅಡಗಿಕೊಂಡಿತ್ತು. ಪಕ್ಕದಲ್ಲಿ ಮಾರ್ಕಾಂಡೆಯ ನದಿ ಸುತ್ತಲೂ ಗುಡ್ಡಗಳು. ಮದ್ಯಾಹ್ನ ಅಡುಗೆ ಮಾಡಿಕೊಂಡು ಊಟ ಮಾಡಬೇಕೆನ್ನುವಷ್ಟರಲ್ಲಿಯೇ ನೀರು ಹಾಯಿಸುತ್ತಿರುವ ಹುಡುಗ 'ಪೋಲೀಸರ ಬಂದರ್ರೀ' ಎಂದು ಚೀರಿದ ಊಟ ಬಿಟ್ಟು ತಂಡದವರು ಕಬ್ಬಿನ ತೋಟದಲ್ಲಿ ದಿಕ್ಕಾಪಾಲಾಗಿ ಓಡಿದರು. ವಡವಿಜೀ ಬಸನಗೌಡರು ಪಕ್ಕದ ಜೋಳದ ಹೊಲದಲ್ಲಿ ಓಡತೊಡಗಿದರು. ಪೊಲೀಸರು ಇವರನ್ನು ಬೆನ್ನತ್ತಿ ಗುಂಡು ಹಾರಿಸುತ್ತ ಹಿಂಬಾಲಿಸಿದರು ವಡವಿಜೀಯವರ ಕಾಲಿಗೆ ಬಳ್ಳಿ ತಗುಲಿ ಬೀಳುತ್ತಾರೆ ಬಸನಗೌಡರು ಇವರನ್ನೆಬ್ಬಿಸಲು ಹೋದಾಗ ವಡವಿಜೀ 'ನೀನು ತಪ್ಪಿಸಿಕೋ ಗುಂಡು ತಗುಲೀತು ನೀನಾದರೂ ತಪ್ಪಿಸಿಕೋ' ಅನ್ನುತ್ತಾರೆ. 'ಗುರುಗಳೆ ನಿಮ್ಮನ್ನು ಬಿಟ್ಟು ಹೋಗುವುದಿಲ್ಲ ಏನಾಗುವುದೊ ಇಬ್ಬರಿಗೂ ಆಗಲಿ' ಎಂದು ಹೇಳುತ್ತಾರೆ ಅಷ್ಟರಲ್ಲೆ ಇವರ ತಲೆಯ ಹತ್ತಿರವೇ ಬಂದೂಕಿನ ಗೋಲಿ ಪಾರಾಯಿತು. ಇವರು ನಿಂತದನ್ನು ನೋಡಿ ಇವರ ಹತ್ತಿರ ಪಿಸ್ತೂಲ ಇರಬಹುದೆಂದು ಭಾವಿಸಿ ಪೋಲೀಸರು ಹಿಮ್ಮೆಟ್ಟುತ್ತಾರೆ.



ಮಾರ್ಕಾಂಡೆಯ ನದಿ ಈಜಿ ದಾಟಿ ವಂಟಮೂರಿಯ ಕಡೆಗೆ ಹೋಗಿ ಕೆಲವು ದಿವಸ ಭೂಗತರಾಗಿ ಉಳಿಯುತ್ತಾರೆ ಮತ್ತೆ ಕುಮರಿ ಆಶ್ರಮಕ್ಕೆ ಬಂದು ಸುಳೆಭಾವಿ ರೇಲ್ವೆ ಸ್ಟೇಶನ್ ಸುಡುವ ಕಾರ್ಯಕ್ರಮ ಹಮ್ಮಿಕೊಳ್ಳುತ್ತಾರೆ ಅಲ್ಲಿ ಸಶಸ್ತ್ರಧಾರಿ ಪೋಲೀಸ ಪಹರೆ ಇರುತ್ತದೆ ಇವರ ತಂಡದ ಕೆಲವರು ಕಬ್ಬಿನ ಹಾಲು ತೆಗೆದುಕೊಂಡು ಊರಿಗೆ ಹೊರಟಿದ್ದೇವೆಂದು ಕೆಲ ಕೊಡಗಳಲ್ಲಿ ಕಬ್ಬಿನ ಹಾಲು ಕೆಲ ಕೊಡಗಳಲ್ಲಿ ಚಿಮಣಿ ಎಣ್ಣೆ ಒಯ್ದಿರುತ್ತಾರೆ. ಪೋಲೀಸರು ಬಂದೂಕುಗಳನ್ನು ಮೂಲೆಯಲ್ಲಿಟ್ಟು ಕಬ್ಬಿನ ಹಾಲು ಕುಡಿಯುವಾಗ ಬಸನಗೌಡರು ತಂಡದ ಜೊತೆ ಒಮ್ಮೆಲೆ ತೆಕ್ಕೆ ಹಾಯ್ದು ಹಿಡಿಯುತ್ತಾರೆ ಗುದ್ದಾಟ ಪ್ರಾರಂಭವಾಗುತ್ತದೆ ಕೆಲವು ಜನ ರೈಫಲ್ ತೆಗೆದುಕೊಂಡು ಓಡುತ್ತಾರೆ. ಕೆಲವು ಜನರು ಕ್ಷಣಾರ್ದದಲ್ಲಿ ಚಿಮಣಿ ಎಣ್ಣೆ ಸುರಿವಿ ಬೆಂಕಿ ಇಡುತ್ತಾರೆ ಮಟ ಮಟ ಮದ್ಯಾಹ್ನದಲ್ಲಿ ಸುಳೇಭಾವಿ ಸ್ಟೇಶನ್ ಧಗ ಧಗ ಉರಿಯುತ್ತದೆ. ಇವರ ತಂಡ ಸುಳೇಭಾವಿ ಬೆಳಗಾವಿ ಸಂಪರ್ಕ ಅಸ್ಥವ್ಯಸ್ಥ ಮಾಡಲು ಸಾಂಬರಾ ಹತ್ತಿರದ ಕಟ್ಟಿಗೆ ಪೂಲನ್ನು ಕೆಡವಿ ಬೆಂಕಿ ಇಟ್ಟು ಧ್ವಂಸ ಮಾಡುತ್ತಾರೆ. ಪೋಲೀಸರು ವಡವಿಜೀ ಮತ್ತು ಬಸನಗೌಡರನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಶೋಧಿಸತೊಡಗುತ್ತಾರೆ. ಕೆಲವು ದಿವಸ ಬಸನಗೌಡರು ಧಾರವಾಡದಲ್ಲಿ ಭೂಗತರಾಗಿರುತ್ತಾರೆ ಅಲ್ಲಿಯೇ ಇವರನ್ನು ಪೋಲೀಸರು ಬಂಧಿಸುತ್ತಾರೆ ೧೬ತಿಂಗಳ ವಿಚಾರಣೆ ಖೈದಿಯಾಗಿ ೨ವರ್ಷ ಕಠಿಣ ಶಿಕ್ಷೆಯಾಗಿ ಹಿಂಡಲಗಿ ಕೇಂದ್ರ ಕಾರಾಗೃಹದಲ್ಲಿ ೪೦ ತಿಂಗಳು ಶಿಕ್ಷೆ ಅನುಭವಿಸುತ್ತಾರೆ.

ಬಡಸದ ಬಸನಗೌಡರು ೧೯೩೮ರಲ್ಲಿ ಕುಂದರನಾಡಿನ ಬೇಡರ ಹಳ್ಳಿಗಳಲ್ಲಿ ಗೌರವ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾರೆ ಬೇಡರ ಹಳ್ಳಿಗಳಿಗೆ ರಸ್ತೆ ಶಾಲೆ ಯಾವುದೇ ಸೌಲಭ್ಯವಿಲ್ಲದೆ ಬಹಳ ಹಿಂದುಳಿದ ಪ್ರದೇಶ ಮತ್ತು ಅಲ್ಲಿ ಬಡತನ ತಾಂಡವವಾಡುತ್ತಿತ್ತು. ಸಹಜವಾಗಿ ಅವರು ಕಳ್ಳತನ ಮಾಡುತ್ತಿದ್ದರು. ಪ್ರೌಢ ಶಿಕ್ಷಣ ಕಾರ್ಯಕ್ರಮದಲ್ಲಿ ಅಂತಹ ಊರುಗಳಲ್ಲಿ ಬೇಡರಿಗೆ ಶಿಕ್ಷಣ ನೀಡಿ ಅವರ ಮನಃ ಪರಿವರ್ತಿಸುವ ಪ್ರಯತ್ನ ಮಾಡಿದರು ದಟ್ಟವಾದ ಅರಣ್ಯಗಳಲ್ಲಿ ೮–೧೦ ಮೈಲಿ ನಡದೇ ಹೋಗುತ್ತಿದ್ದರು.

ಸ್ವಾತಂತ್ರ್ಯನಂತರ ಸತತ ೩೦ ವರ್ಷಗಳ ಕಾಲ ಹುದಲಿಯ ಗ್ರಾಮ ಪಂಚಾಯತಿಯ ಚೇಅರಮನ್‌ರಾಗಿ, ಊರಿಗೆ ಶುದ್ದ ಕುಡಿಯುವ ನೀರು, ರಸ್ತೆಗಳನ್ನು ನಿರ್ಮಿಸುತ್ತಾರೆ. ಬಳ್ಳಾರಿ ಹಳ್ಳಕ್ಕೆ ಸೇತುವೆ ಇರುವುದಿಲ್ಲ ನಾಲ್ಕಾರು

ಬೇಡರ ಹಳ್ಳಿಗಳು ಸಂಪರ್ಕವಂಚಿತವಾಗಿದ್ದವು ಸರಕಾರದ ಮೇಲೆ ಪ್ರಭಾವ ಬೀರಿ ಸೇತುವೆ ನಿರ್ಮಿಸುತ್ತಾರೆ ಬೆಳಗಾವಿ ಗೋಕಾಕ ಮುಖ್ಯ ರಸ್ತೆ ಕಾಮಗಾರಿಗೆ ಸುಳೆಭಾವಿ ಹುದಲಿ ನಡುವೆ ಗುಡ್ಡಗಳಲ್ಲಿ ರಸ್ತೆ ಮಾಡಲು ಗುಡದಳ್ಳಿ ಜನ ಎಂಜಿನೀಯರಗಳಿಗೆ ತೊಂದರೆ ಕೊಡುತ್ತಾರೆ ಬಸನಗೌಡರು ಎರಡು ದಿವಸ ಸ್ವತಃ ಎಂಜಿನಿಯರಗಳ ಜೊತೆ ಇದ್ದು ಹಳ್ಳಿಗರಿಗೆ ಬುದ್ದಿವಾದ ಹೇಳಿ ರಸ್ತೆ ಕಾಮಗಾರಿ ಪ್ರಾರಂಭ ಮಾಡಿಸುತ್ತಾರೆ ಹೀಗೆ ಹಲವಾರು ಸಾರ್ವಜನಿಕ ಕಾರ್ಯಕ್ರಮ ಮಾಡಿಸುತ್ತಾರೆ ೧೫ ವರ್ಷಗಳ ಕಾಲ ಬೆಳಗಾವಿ ತಾಲೂಕ ಪ್ರಾಥಮಿಕ ಭೂ ಅಭಿವೃದ್ದಿ ಬ್ಯಾಂಕಿನ ಅಧ್ಯಕ್ಷರಾಗಿ, ಬೆಳಗಾವಿಎ.ಪಿ.ಎಂ.ಸಿ ಸದಸ್ಯರಾಗಿ, ಬೆಳಗಾವಿ ಸಹಕಾರಿ ಯುನಿಯನ್‌ನ ಸದಸ್ಯರಾಗಿ ಹೀಗೆ ಹತ್ತು ಹಲವಾರು ಸಂಘ ಸಂಸ್ಥೆಗಳಲ್ಲಿ ಇವರ ಪ್ರಾಮಾಣಿಕ ಸೇವೆ ಸಂದಿದೆ. ಬೆಳಗಾವಿ ತಾಲೂಕ ಸ್ವಾತಂತ್ರ್ಯಯೋಧರ ಸಂಘದ ಅಧ್ಯಕ್ಷರಾಗಿ ಸ್ವಾತಂತ್ರ್ಯಯೋಧರಿಗೆ ಯೋಗ್ಯ ಸೌಲಭ್ಯ ದೊರಕಿಸಲು ಶ್ರಮಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿಯಾಗಿ, ಜಿಲ್ಲಾ ಜನತಾ ಪಕ್ಷದ ಉಪಾಧ್ಯಕ್ಷರಾಗಿ ಸಂಘಟನೆ ಮಾಡಿದರು. ಅಂಕಲಗಿ ಅಡವಿ ಸಿದ್ದೇಶ್ವರ ಮಠದ ೧೯೬೩ ರಲ್ಲಿ ಪ್ರಥಮ ಜಾತ್ರ್ಯೋತ್ಸವದಲ್ಲಿ ಜಾನುವಾರು ಜಾತ್ರೆ ಸಂಘಟಿಸಲು ಅವಿರತ ಪ್ರಯತ್ನ ಪಟ್ಟಿದ್ದಾರೆ. ಕಾದಂಬರಿಕಾರ ಬಸವರಾಜ ಕಟ್ಟೀಮನಿ ಮತ್ತು ವಾಲಿ ಚೆನ್ನಪ್ಪ, ತಲ್ಲೂರ ರಾಯನಗೌಡರ ಜೊತೆ ಇವರ ಒಡನಾಟ ಸತತವಾಗಿರುತ್ತಿತ್ತು.

## ಶ್ರೀಶೈಲಪ್ಪ ಕಾಗತಿಕರ

ಶ್ರೀಶೈಲಪ್ಪನವರು ಗೋಕಾಕ ತಾಲೂಕಿನ ಅಂಕಲಗಿ ಜಂಗಮ ಮನೆತನದ ಅಪ್ಪಯ್ಯ ಲಿಂಗಮ್ಮ ದಂಪತಿಗಳ ಪುಣ್ಯಗರ್ಭದಲ್ಲಿ ೧೮೭೫ ರಲ್ಲಿ ಅಡವಿ ಸ್ವಾಮಿಗಳ ಪಾದಸ್ಪರ್ಶದ ಪುಣ್ಯ ಊರು ಅಂಕಲಗಿಯಲ್ಲಿ ಜನಿಸಿದರು. ದೇಶದಲ್ಲಿ ಸ್ವಾತಂತ್ರ್ಯ ಚಳುವಳಿಯ ತೀವ್ರತೆಯ ಕಾಲ ಅದೇ ತಾನೆ, ಮಹಾತ್ಮ ಗಾಂಧೀಜಿಯವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿ ಸತ್ಯಾಗ್ರಹ ಮಾರ್ಗದಲ್ಲಿ ಸ್ವಾತಂತ್ರ್ಯ ಚಳುವಳಿಯ ನೇತೃತ್ವ ವಹಿಸಿಕೊಂಡಿದ್ದರು. ಶ್ರೀಶೈಲಪ್ಪನವರು ವ್ಯಾಪಾರಕ್ಕಾಗಿ ನಗರ ಪಟ್ಟಣಗಳಿಗೆ ಹೋದಾಗ ಸ್ವಾಂತಂತ್ರ್ಯ ಚಳುವಳಿಯೆಡೆಗೆ ಪ್ರೇರೇಪಿತರಾಗಿ ತಾವೂ ಸಹ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ೧೯೨೦ ರ ಸುಮಾರಿಗೆ ಬ್ರಾಹ್ಮಣೇತರರು ಸ್ವಾತಂತ್ರ್ಯ ಚಳುವಳಿಯಲ್ಲಿ ಆಸಕ್ತಿ ಹೊಂದಿರಲಿಲ್ಲ. ಗೋಕಾಕ ತಾಲೂಕಿನ ಕುಂದರನಾಡಿನ ಹಳ್ಳಿಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಸಂಘಟನೆಗೆ ತೊಡಗುತ್ತಾರೆ. ತಾವೇ ಮೊದಲು ಸತ್ಯಾಗ್ರಹಿಯಾಗಿ ೧೯೩೧ ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ, ಗ್ರಾಮೀಣ ಜನರನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಾರೆ. ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಾರೆ. ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಕ್ಕಾಗಿ ವೀಸಾಪೂರ ಜೈಲಿನಲ್ಲಿ ಎರಡು ವರ್ಷಗಳ ಶಿಕ್ಷೆಗೊಳಪಡುತ್ತಾರೆ. ವೀಸಾಪೂರ ಜೈಲಿನಲ್ಲಿದ್ದಾಗಲೇ ಸರೋಜಿನಿ ನಾಯ್ಡು, ಮೊರಾರ್ಜಿ ದೇಸಾಯಿ ಇವರ ಒಡನಾಟ ಮಾರ್ಗದರ್ಶನ ದೊರೆಯಿತು. ಜೈಲಿನಿಂದ ಹೊರಬಂದ ತಕ್ಷಣ ಸ್ವಾತಂತ್ರ್ಯ ಚಳುವಳಿಯ ತೀವ್ರ ಸಂಘಟನೆಯ ಜೊತೆಗೆ ನಾಡಿನ ಜನರ ಅಭಿವೃದ್ಧಿಗೋಸ್ಕರ ಹಲವಾರು ಯೋಚನೆಗಳನ್ನು ಯೋಜನೆಗಳನ್ನಾಗಿ ಮಾರ್ಪಡಿಸಲು ಸಂಕಲ್ಪ ತೊಟ್ಟರು.

೧೯೨೪ ರಲ್ಲಿ ಬೆಳಗಾವಿಯಲ್ಲಿ ಮಹಾತ್ಮಾಗಾಂಧಿಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಐತಿಹಾಸಿಕ ಕಾಂಗ್ರೆಸ್ ಅಧಿವೇಶನದ ಯಶಸ್ಸಿಗೆ ಮುಂಚೂಣಿಯಲ್ಲಿದ್ದರು, ಅದೇ ಅಧಿವೇಶನದಲ್ಲಿ ಕರ್ನಾಟಕದ ಗಾಂಧಿ ಎಂದೇ ಹೆಸರುವಾಸಿಯಾದ ಹರ್ಡೆಕರ ಮಂಜಪ್ಪನವರ ಕರ್ನಾಟಕ ಏಕೀಕರಣ ಪರಿಷತ್ತಿನ ಯಶಸ್ಸಿಗಾಗಿ ಹಗಲಿರುಳೆನ್ನದೆ ದುಡಿದರು ನಮ್ಮ ಸಮಾಜದ ಉನ್ನತಿ ಕೇವಲ ಪರರ ದಾಸ್ಯದ ಬಿಡುಗಡೆಯಿಂದಷ್ಟೆ ಸಾಧ್ಯವಿಲ್ಲವೆಂದು, ನಮ್ಮ ಜನ ಶೈಕ್ಷಣಿಕವಾಗಿ ಬೆಳೆದು ಆಂತರಿಕ ದಾಸ್ಯ ಕಳಚಿದಾಗಲೆ ಸಮಾಜ ಉನ್ನತಿ ಸಾಧ್ಯವೆಂದು ತೀರ್ಮಾನಿಸಿದರು. ಇವರ ಒಡನಾಟ ಅರಟಾಳ ರುದ್ರಗೌಡರು ಮತ್ತು ಬಿ.ಬಿ. ಮಮದಾಪೂರರಂಥವರ ಜೊತೆಗೂ ಮಧುರವಾಗಿತ್ತು. ವೀಸಾಪೂರ ಜೈಲಿನಲ್ಲಿದ್ದಾಗಲೇ ಸರೋಜಿನಿ ನಾಯ್ಡುರಂಥವರ ಸಂಪರ್ಕದಲ್ಲಿದ್ದ ಶ್ರೀಶೈಲಪ್ಪನವರಿಗೆ ವ್ಯಾಪಾರಕ್ಕಾಗಿ ಮುಂಬೈಗೆ ಹೋಗುವ ಸಂದರ್ಭಗಳಲ್ಲಿ ಮುಂಬೈ ಸರಕಾರದಲ್ಲಿದ್ದ ಸರ್ ಸಿದ್ದಪ್ಪ ಕಂಬಳಿ ಇವರ ಜೊತೆ ಸಂಪರ್ಕ ಏರ್ಪಟ್ಟಿತ್ತು. ಅವರು ಶ್ರೀಶೈಲಪ್ಪನವರಿಗೆ ನಿಮ್ಮ ಸ್ವಾತಂತ್ರ್ಯ ಚಳುವಳಿಯ ಹೋರಾಟ ಉದ್ದಿಮೆಗಳ ಜೊತೆಗೆ ಶಿಕ್ಷಣ ಪ್ರಸಾರ ಮಾಡಿರೆಂದು ಕಿವಿ ಮಾತು ಹೇಳಿದರು.

೧೯೩೭ರಲ್ಲಿ ಗಾಂಧೀಜಿಯವರು ಇವರನ್ನು 'ಬೆಳಗಾವಿ ಜಿಲ್ಲಾ ಗೋ ರಕ್ಷಣಾ ಸಮಿತಿ ಕಾರ್ಯದರ್ಶಿ ಎಂದು ನಿಯಮಿಸುತ್ತಾರೆ. ಶ್ರೀಶೈಲಪ್ಪನವರು ಹಳ್ಳಿಹಳ್ಳಿಗೆ ಹೋಗಿ ಜಾನುವಾರುಗಳ ಮಹತ್ವ ಉಪಯೋಗ ತಿಳಿಸಿ ರೈತರಲ್ಲಿ ಜಾಗೃತಿ ಮೂಡಿಸಿದರು.

೧೯೨೦ ರ ಸುಮಾರಿಗೆ ಶ್ರೀಶೈಲಪ್ಪನವರು ದೇಶದ ಸ್ವಾತಂತ್ರ್ಯದ ಹಂಬಲದಿಂದ ಕಾಂಗ್ರೆಸ್ ಸಂಘಟನೆಯಲ್ಲಿ ತೊಡಗಿದರು. ಕೆ.ಪಿ.ಸಿ.ಸಿ. ಸದಸ್ಯರಾಗಿದ್ದರೂ ಎಲೆ ಮರೆಯ ಕಾಯಿಯಂತೆ ಪಕ್ಷದ ಸೇವೆ ಮಾಡಿದರು. ೧೯೩೭ ರಲ್ಲಿ ಹುದಲಿಯಲ್ಲಿ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಜರುಗಿದ ಖಾದಿ ಸಮ್ಮೇಳನದಲ್ಲಿ ಮನಃಪೂರ್ವಕವಾಗಿ ಭಾಗವಹಿಸಿದರು. ಒಮ್ಮೆ ಮುಂಬೈ ಸರಕಾರದ ಮಂತ್ರಿಗಳಾದ ಸರ್. ಸಿದ್ದಪ್ಪ ಕಂಬಳಿಯವರು 'ಮುಂಬೈ ವಿಧಾನ ಸಭೆಗೆ ತಮ್ಮಂಥವರು ಬೇಕು' ಅಂದಾಗ ಶ್ರೀಶೈಲಪ್ಪನವರು 'ನೋಡ್ರಿ ಊರಾಗ ಕೆಲಸ ಬಾಳ ಅದಾವ ಮುಂಬೈಕ ಬಂದು ಏನು ಮಾಡಲಿ' ಎಂದು ನಯವಾಗಿ ತಿರಸ್ಕರಿಸಿದರು. ಅಂದು ಅಧಿಕಾರ ಪಡೆದಿದ್ದರೆ ನಾಡಿನ ಚಿತ್ರಣವೇ ಬೇರೆಯಾಗ ಬಹುದಾಗಿತ್ತು. ಇಷ್ಟೆಲ್ಲಾ ಇವರ ಪ್ರಾಮಾಣಿಕ ಸೇವೆ ನಾಡಿಗೆ ಸಂದರೂ ಜಾತಿ ರಾಜಕಾರಣ, ಗುಂಪುಗುಳಿತನದಿಂದ ಬೇಸತ್ತು ಕೆಲವು ಕಾಲ ಕಾಂಗ್ರೆಸನಿಂದ ದೂರ ಉಳಿದರು. ಅಷ್ಟರಲ್ಲಾಗಲೇ ಪ್ರಜಾ ಸೋಶಿಯಾಲಿಸ್ಟ್ ಪಾರ್ಟಿ ಮೊಳಕೆಯೊಡೆಯುತ್ತಿತ್ತು. ಪದ್ಮಾವತಿ ಅಂಗಡಿಯವರು ಬೆಳಗಾವಿ ಜಿಲ್ಲೆಯಲ್ಲಿ ಮುಂಚೂಣಿಯಲ್ಲಿದ್ದು ಪಕ್ಷದ ಸಂಘಟನೆ ಮಾಡತೊಡಗಿದ್ದರು ಶ್ರೀಶೈಲಪ್ಪನವರು ವಯಸ್ಸಾಗಿದ್ದರೂ ಪ್ರಜಾ ಸೋಶಿಯಾಲಿಸ್ಟ್ ಪಾರ್ಟಿ ಸಂಘಟನೆಯಲ್ಲಿ ತೊಡಗಿ ಪಕ್ಷದ ಹುರಿಯಾಳುಗಳ ಪರ ಪ್ರಚಾರಕ್ಕಿಳಿದರು. ಮಹಾತ್ಮಾಗಾಂಧೀಜಿಯವರ ಹೆಸರಿನ ಮೇಲೆ ಕಾಂಗ್ರೆಸ್ ಮುನ್ನಡೆ ಸಾಧಿಸಿತು. ಹಳ್ಳಿಗಳಲ್ಲಿ ಕಾಂಗ್ರೆಸ್ಸಿಗೆ ಬುನಾದಿ ಹಾಕಲು ಶ್ರಮಪಟ್ಟ ಶ್ರೀಶೈಲಪ್ಪನವರನ್ನು ಸ್ವಾತಂತ್ರ್ಯಾನಂತರ ಕಾಂಗ್ರೆಸ್ಸಿನ ಪುಢಾರಿಗಳು ಗುರುತಿಸದೆ ಹೋದರೂ ಹರ್ಡೇಕರ ಮಂಜಪ್ಪ ಮತ್ತು ಸರ್.ಸಿದ್ದಪ್ಪ ಕಂಬಳಿಯವರಿಂದ ಪ್ರಭಾವಿತರಾಗಿದ್ದ ಇವರು, ಅಪ್ಪಟ ಗಾಂಧಿವಾದಿ ಸರಳಜೀವಿ, ವಿನಯಶೀಲರಾಗಿಯೇ ಉಳಿದರು. ಅಧಿಕಾರಕ್ಕೆ ಆಸೆ ಪಡದೆ ತಮ್ಮ ಜೀವಿತಾವಧಿಯಲ್ಲಿ ಸಮಾಜ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು.

## ಬಿದರಿ ವಾಮರಾಯರು

ಕರ್ನಾಟಕದಲ್ಲಿ ರಾಷ್ಟ್ರೀಯತೆಯನ್ನೂ ಸ್ವಾತಂತ್ರ್ಯ ಪ್ರೇಮವನ್ನೂ ಪ್ರಸಾರಗೊಳಿಸಿದ ಕುಂದರನಾಡಿನ, ಹುದಲಿ ಪಶ್ಚಾಪೂರ ಮತ್ತು ಅಕ್ಕತಂಗೇರ ಹಾಳಗಳಿಗೆ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮಹತ್ವದ ಸ್ಥಾನ ಸಲ್ಲುತ್ತದೆ. ಬಾಲಗಂಗಾಧರ ತಿಲಕರು ಜೀವಿಸಿರುವವರೆಗೂ ಕಾಂಗ್ರೆಸ್ ಚಳುವಳಿಯಲ್ಲಿ



ವಿಶೇಷವಾಗಿ ಭಾಗವಹಿಸುತ್ತಿದ್ದವರು ಬ್ರಾಹ್ಮಣರು. ಗಾಂಧೀಜಿಯವರು ನಾಯಕತ್ವ ವಹಿಸಿದ ತರುವಾಯವೇ ಬ್ರಾಹ್ಮಣೇತರರು ರೈತರು ಕೂಲಿಕಾರರು ಚಳುವಳಿಯತ್ತ ಆಕರ್ಷಿತರಾದರೆಂಬುದು ಸತ್ಯಸಂಗತಿ. ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಇಂದಿನಂಥ ಜಾತೀಯ ಭಾವನೆಗಳಿರಲಿಲ್ಲ. ಸಮಾಜಕ್ಕಾಗಿ, ದೇಶಕ್ಕಾಗಿ ನಿಸ್ವಾರ್ಥಬುದ್ಧಿಯಿಂದ ದುಡಿಯುವ ಕಾರ್ಯಕರ್ತರಿಗೆ ಆಗ ಎಲ್ಲ ಜಾತಿಗಳ ಜನರಲ್ಲಿ ಗೌರವವಿತ್ತು. ಸ್ವಾತಂತ್ರ್ಯ ದಿನ ಸಮೀಪಿಸುತ್ತಿದ್ದಂತೆ ಕೆಲವು ಬ್ರಾಹ್ಮಣ ಕಾರ್ಯಕರ್ತರು ಕಾಂಗ್ರೆಸ್ ಸಂಸ್ಥೆಯನ್ನು ತಮ್ಮ ಹಿಡಿತದಲ್ಲಿಯೇ ಇಟ್ಟುಕೊಳ್ಳಲು ಪ್ರಯತ್ನಿಸಿದಾಗ ಮಾತ್ರ ಅವರ ವಿರುದ್ಧ ಬ್ರಾಹ್ಮಣೇತರರು ಸಿಡಿದೆದ್ದರು. ಇದು ಐತಿಹಾಸಿಕ ಸತ್ಯಾಂಶ. ಅಕ್ಕತಂಗೇರಹಾಳದಲ್ಲಿ ಮಾತ್ರ ಈ ಸಮಸ್ಯೆ ಹುಟ್ಟಲಿಲ್ಲ. ವಾಮನರಾವ ಬಿದರಿಯವರು ತಮ್ಮ ಅಚ್ಚ ರಾಷ್ಟ್ರೀಯ ವೃತ್ತಿಯಿಂದ ಇಲ್ಲಿಯ ಎಲ್ಲ ಜಾತಿಯ ಜನರನ್ನು ಒಲಿಸಿಕೊಂಡಿದ್ದರು. ಇಂದು ಅಕ್ಕತಂಗೇರಹಾಳದಲ್ಲಿ ಯಾರನ್ನೇ ಕೇಳಿದರೂ "ನಮ್ಮ ಊರು ಸ್ವಾತಂತ್ರ್ಯ ಹೋರಾಟದಲ್ಲಿ ಮುಂದೆ ಬರಲು ವಾಮನರಾಯರೇ ಕಾರಣರು" ಎಂದು ಎಲ್ಲರೂ ಹೇಳುತ್ತಾರೆ.

ವಾಮನರಾಯರು ಜಮಖಂಡಿ ತಾಲೂಕಿನ ಬಿದರಿಯವರು. ದೇಸಾಯಿ ಮನೆತನದವರು. ಸುಮಾರು ೮೦ ಎಕರೆ ಜಮೀನಿನ ಒಡೆಯರು. ಬೆಳಗಾವಿಯಲ್ಲಿ ಹೈಸ್ಕೂಲು ಶಿಕ್ಷಣ ಪಡೆದರು. ಆಗಲೇ ಅವರಲ್ಲಿ ರಾಷ್ಟ್ರೀಯ ಮನೋವೃತ್ತಿ ಬೆಳೆದಿತ್ತು. ದೇಶಭಕ್ತ ಗಂಗಾಧರರಾವ್ ದೇಶಪಾಂಡೆ ಅವರಿಂದ ದೇಶಸೇವೆಯ ದೀಕ್ಷೆ ಪಡೆದು ೧೯೨೧ರಿಂದಲೂ ರಾಷ್ಟ್ರೀಯ ವಿಧಾಯಕ ಕಾರ್ಯಗಳಲ್ಲಿ ಭಾಗವಹಿಸುತ್ತ ಬಂದರು.

೧೯೨೪ರಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ಜರುಗಿದಾಗ ಅದನ್ನು ಯಶಸ್ವಿಗೊಳಿಸಲು ಹಗಲಿರುಳೂ ದುಡಿದರು. ೧೯೨೫ರಲ್ಲಿ ಗಂಗಾಧರರಾಯರು ಕುಮರಿ ಆಶ್ರಮ ಸ್ಥಾಪಿಸುತ್ತಲೂ, ಪುಂಡಲೀಕ ಕಾತಗಡೆ, ರಾಮಚಂದ್ರ ವಡವಿ, ಭಾಸ್ಕರ ವಿಷ್ಣು ಕಾಳೆ, ಗಂಗಪ್ಪ ಯಮಕನಮರಡಿ, ಅಣ್ಣೂ ಗುರೂಜಿ ಇವರೊಂದಿಗೆ ವಾಮನರಾಯರು ಕೂಡಿಕೊಂಡು ವಿಧಾಯಕ ಕಾರ್ಯಗಳಲ್ಲಿ ತೊಡಗಿಸಿಕೊಂಡರು.

ತದನಂತರ ಕುಂದರನಾಡಿನ ಉರುಬಿನಹಟ್ಟಿಯಲ್ಲಿ ನೆಲೆಸಿ ಸುತ್ತಲಿನ ಊರುಗಳಲ್ಲಿ ಕೈರಾಟಿಯ ಮೇಲೆ ನೂಲುವ ಕಾರ್ಯ ಆರಂಭಿಸಿದರು. ಇದರ

ಜೊತೆಗೆ ಅಸ್ಪೃಶ್ಯತಾ ನಿವಾರಣೆ, ಪಾನ ನಿರೋಧ ಪ್ರಚಾರಗಳನ್ನು ಮಾಡುತ್ತಿದ್ದರು. ಉರುಬಿನಟ್ಟಿ ಈರನಹಟ್ಟಿ ಗ್ರಾಮದ ತರುಣರಿಗಾಗಿ ವ್ಯಾಯಾಮ ಶಾಲೆಗಳನ್ನು ಕಟ್ಟಿಸಿದರು. ಗ್ರಾಮಗಳಲ್ಲಿ ನೂಲು ತೆಗೆಯುವ ಕಾರ್ಯವನ್ನು ಬೆಳೆಸುವ ಸಲುವಾಗಿ ವಾಮನರಾಯರು ಕೊಳವಿ ಊರಿನಲ್ಲಿ ನೆಲೆನಿಂತರು. ಸುತ್ತಲಿನ ಹಳ್ಳಿಗಳಲ್ಲಿ ಸಂಚರಿಸಿ ಕೈರಾಟಿಯ ಮೇಲೆ ನೂಲಲು ಹೆಣ್ಣು ಮಕ್ಕಳಿಗೆ ಬೋಧಿಸಿ ೨೦೦ ರಾಟಿಗಳ ಮೇಲೆ ನೂಲುವ ಕಾರ್ಯ ನಡೆಯುವಂತೆ ಮಾಡಿದರು. ಆ ನೂಲನ್ನು ವಾರಕ್ಕೊಂದು ಸಲ ಖರೀದಿ ಮಾಡಿ ಕುಮರಿ ಆಶ್ರಮಕ್ಕೆ ಕಳಿಸುತ್ತಿದ್ದರು.

೧೯೩೦ರಲ್ಲಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಆರಂಭಿಸಿದಾಗ ಅದರ ಪ್ರಚಾರಕ್ಕಾಗಿ ಬೆಳಗಾವಿಯಿಂದ ಸತ್ಯಾಗ್ರಹಿಗಳ ೫ ಪಡೆಗಳನ್ನು ಕಳಿಸಲಾಯಿತು. ವಾಮನರಾಯರು ಒಂದು ಪಡೆಯ ನಾಯಕರಾಗಿ ಪುಣೆ ದಾರಿ ಹಿಡಿದು ಹೊರಟರು. ಯಮಕನಮರಡಿಯಲ್ಲಿ ಸಭೆ ಮಾಡಿದಾಗ ವಾಮನರಾಯರನ್ನು ಬಂಧಿಸಿ ೬ ತಿಂಗಳು ಶಿಕ್ಷೆ ನೀಡಿದರು.

ನಂತರ ವಾಮನರಾಯರು ಅಕ್ಕತಂಗೇರಹಾಳಕ್ಕೆ ಬಂದು ನೆಲೆಸಿದರು. ಅಣ್ಣಾ ಬಸಪ್ಪ ಮರಲಿಂಗಣ್ಣವರ ಮೊದಲಾದವರು ಈ ವೇಳೆಗಾಗಲೇ ರಾಷ್ಟ್ರೀಯ ಆಂದೋಲನದಲ್ಲಿ ಪ್ರವೇಶಿಸಿದ್ದರು. ಅವರ ಸಹಾಯದಿಂದ ವಾಮನರಾಯರು ಅಕ್ಕತಂಗೇರಹಾಳ ಗ್ರಾಮವನ್ನು ಆಂದೋಲನದ ಪ್ರಬಲ ಕೇಂದ್ರವಾಗಿ ರೂಪಿಸಿದರು.

೧೯೩೨ರಲ್ಲಿ ಚಳುವಳಿಯಲ್ಲಿ ವಾಮನರಾಯರೊಡನೆ ಅವರ ಪತ್ನಿ ಶ್ರೀಮತಿ ಪದ್ಮಾವತಿಬಾಯಿಯವರೂ ಭಾಗವಹಿಸಿದರು. ಭಾಷಣ ಮಾಡಿದ ಕಾರಣಕ್ಕಾಗಿ ವಾಮನರಾಯರಿಗೆ ೧೮ ತಿಂಗಳ ಶಿಕ್ಷೆಯಾಯಿತು. ಆಗ ಅವರ ಪತ್ನಿ ಪದ್ಮಾವತಿದೇವಿಯವರು ತಮ್ಮ ಜೊತೆಗೆ ಸೌ. ನಿಂಗವ್ವ ಹುಚ್ಚಪ್ಪ ಹೊಳೆಯಾಚಿ, ಸೌ.ನಿಂಗವ್ವ ಬಸಪ್ಪ ಮರಲಿಂಗಣ್ಣವರ ಮೊದಲಾದವರನ್ನು ಕರೆದುಕೊಂಡು ಗೋಕಾಕದಲ್ಲಿ ಪಿಕೆಟಿಂಗ್ ಮಾಡಿದರು. ಅವರಿಗೆ ಒಂದೊಂದು ತಿಂಗಳಿನ ಸಾದಾ ಶಿಕ್ಷೆಯಾಯಿತು. ಮುಂದೆ ೧೯೩೩ರಲ್ಲಿ ಪದ್ಮಾವತಿಬಾಯಿಯವರು ತಮ್ಮ ಜೊತೆಗೆ ಸೌ. ಸಂಗವ್ವ ಗಂಗಪ್ಪ ಯಮಕನಮರಡಿ(ಹುದಲಿ), ಸೌ. ಬಸವಣ್ಣೆವ್ವ ಚನ್ನಪ್ಪ ವಾಲಿ (ಸಂಪಗಾವಿ), ಸೌ. ಗೌರವ್ವ ನಾವಲಗಿ, ಬಾಳಪ್ಪಾ ಅಪ್ಪಯ್ಯ ಹೊಳೆಯಾಚೆ ಇವರನ್ನು ಕರೆದುಕೊಂಡು ಬೆಳಗಾವಿಯಲ್ಲಿ ಪಿಕೆಟಿಂಗ್ ಮಾಡಿದ್ದರಿಂದ ಅವರಿಗೆ ಆರಾರು ತಿಂಗಳ ಶಿಕ್ಷೆಯಾಯಿತು.



೧೯೪೨ರಲ್ಲಿ ಚಲೇಜಾವ್ ಚಳುವಳಿ ಆರಂಭವಾದಾಗ ವಾಮನ ರಾಯರೇ ಅದರ ಸೇನಾಪತಿಯಾಗಿ, ಕಡೆತನಕ ಭೂಗತರಾಗಿ ಉಳಿದು ಆಂದೋಲನ ಸಂಘಟಿಸಿದರು. ಇವರನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂ. ಬಹುಮಾನ ಕೊಡುವುದಾಗಿ ಸರಕಾರ ಪ್ರಕಟಿಸಿತ್ತು. ಕುಂದರ ನಾಡಿನಲ್ಲಿ ನಡೆದ ಅನೇಕ ವಿಧ್ವಂಸಕ ಕಾರ್ಯಗಳಿಗೆ ವಾಮನರಾಯರೇ ನಾಯಕರಾಗಿದ್ದರು. ಸುಲಧಾಳ ರೇಲ್ವೆ ನಿಲ್ದಾಣ ಸುಡುವಂಥ ಸಾಹಸದ ಕೃತ್ಯವು ಇವರ ನೇತೃತ್ವದಲ್ಲಿ ನಡೆದಿತ್ತು. ೧೯೪೪ರಲ್ಲಿ ಗಾಂಧೀಜಿಯವರು ಜೈಲಿನಿಂದ ಬಿಡುಗಡೆ ಹೊಂದಿ ಬಂದಾಗ ಭೂಗತ ಕಾರ್ಯಕರ್ತರೆಲ್ಲರೂ ಪ್ರಕಟವಾಗಬೇಕೆಂದು ಆದೇಶವಿತ್ತರು. ಆಗ ವಾಮನರಾಯರು ೧–೮–೧೯೪೪ರಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಪ್ರತ್ಯಕ್ಷರಾದರು. ಆಗ ಅವರಿಗೆ ಆರು ತಿಂಗಳ ಶಿಕ್ಷೆಯಾಯಿತು.

ವಾಮನರಾಯರು ತಮ್ಮ ಸಮಸ್ತ ಬದುಕನ್ನು ದೇಶಸೇವೆಗಾಗಿ ಮುಡಿಪಿಟ್ಟರು. ೧೯೪೫ರಲ್ಲಿ ಬಾಳಾಸಾಹೇಬ ಖೇರರ ಅಧ್ಯಕ್ಷತೆಯಲ್ಲಿ ಪ್ರಜಾಪರಿಷತ್ತಿನ ಅಧಿವೇಶನ ಜರುಗಿದಾಗ ತಮ್ಮ ಮೈಯಲ್ಲಿ ೧೦೩ ಡಿಗ್ರಿ ಜ್ವರವಿದ್ದರೂ ವಾಮನರಾಯರು ಓಡಾಡಿ ಕೆಲಸ ಮಾಡಿದ ಪರಿಣಾಮವಾಗಿ ಅವರಿಗೆ ನ್ಯೂಮೋನಿಯಾ ಆಗಿ ೧೯೪೫ರಲ್ಲಿ ತೀರಿಕೊಂಡರು. ಇಂಥ ಹೋರಾಟಗಾರರ ತ್ಯಾಗ ಬಲಿದಾನದಿಂದ ಸ್ವಾತಂತ್ರ್ಯ ದೊರೆಯಿತು. ಆದರೆ ಅದರ ಫಲವನ್ನು ನೋಡಲು ಅವರಿರಲಿಲ್ಲ.

## ಅಣ್ಣು ಗುರೂಜಿ

ದೇಶದ ಸ್ವಾತಂತ್ರ್ಯಕ್ಕಾಗಿ, ಕರ್ನಾಟಕ ಏಕೀಕರಣಕ್ಕಾಗಿ, ಸಮಾಜ ಸ್ವಾಸ್ಥ್ಯಕ್ಕಾಗಿ ಹೋರಾಟ ಹೀಗೆ ಹೋರಾಟಕ್ಕೆ ತಮ್ಮ ಜೀವನ ಮುಡಿಪಾಗಿಟ್ಟ ಸ್ವಾತಂತ್ರ್ಯ ಸೇನಾನಿ ಅಣ್ಣು ಗುರೂಜಿಯವರು ಕರ್ನಾಟಕ ಕಂಡ ಅಪರೂಪದ ಧೀಮಂತ ನಾಯಕರು. ಮುಖದ ಮೇಲೆ ತೇಜಸ್ಸು, ಮುತ್ಸದ್ದಿತನದ ಕಳೆ. ಅರಳು ಹುಡಿದಂತೆ ಮಾತು. ಸಾದಾ ಖಾದಿ ಅಂಗಿ, ಖಾದಿ ಧೋತರ, ಖಾದಿ

ಟೊಪ್ಪಿಗೆ ತೀರಾ ಸಾಮಾನ್ಯನಂತೆ ತೋರುತ್ತಿದ್ದ ಅಣ್ಣು ಗುರೂಜಿಯವರು ಅಸಾಮಾನ್ಯ ವ್ಯಕ್ತಿಯಾಗಿದ್ದರು. ಅಗ್ರಗಣ್ಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರ ಮೂಲ ಹೆಸರು ಬಾಳಕೃಷ್ಣ ಯಮೋಜಿ ದೇಶಪಾಂಡೆ. ಅವರ ತಾಯಿ ಅವರನ್ನು ಅಣ್ಣು ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಪಾಚ್ಚಾಪುರದ ರಾಷ್ಟ್ರೀಯ ಶಾಲೆಯಲ್ಲಿ ಕೆಲವು ವರ್ಷ ಬೋಧನಾ ಕಾರ್ಯ ಕೈಕೊಂಡ ಕಾರಣ ಗುರೂಜಿ, ಅಣ್ಣು ಗುರೂಜಿ ಎಂದು ಕರೆಯಹತ್ತಿದರು. ಮುಂದೆ ಅದೇ ಹೆಸರಿನಲ್ಲಿಯೇ ಪ್ರಖ್ಯಾತರಾದರು.

ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಸುಲ್ತಾನಪುರದಲ್ಲಿ ೧೨–೧–೧೯೦೫ರಂದು ಇವರ ಜನನವಾಯಿತು. ತಾಯಿ ಅಂಬಾಬಾಯಿ ತಂದೆ ಯಮೋಜಿ ದೇಶಪಾಂಡೆ. ಸುಲ್ತಾನಪುರ ಮದಿಹಳ್ಳಿ ಹಾಗೂ ಪಾಚ್ಛಾಪುರದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು ಮುಲ್ಕಿ ಪರೀಕ್ಷೆ ಪಾಸಾದರು. ಮನೆತನದ ಪರಿಸ್ಥಿತಿ ತೀರಾ ನಾಜೂಕಾಗಿದ್ದರಿಂದ ಹೆಚ್ಚಿನ ಶಿಕ್ಷಣ ಪಡೆಯದೆ ನೌಕರಿಗೆ ಶರಣಾಗಬೇಕಾಯಿತು. ಆಗ ಮರಾಠಿ ಬಲ್ಲವರಿಗೆ ಮಾತ್ರ ಸರಕಾರಿ ಕೆಲಸ ಸಿಗುತ್ತಿತ್ತು. ಅಣ್ಣು ಗುರೂಜಿಯವರು ಮನೆಯಲ್ಲಿಯೇ ಮರಾಠಿ ಕಲಿತು ಶಹಾಪುರ(ಬೆಳಗಾವಿ) ತಾಲೂಕ ಕಚೇರಿಯಲ್ಲಿ ಕಾರಕೂನರಾಗಿ ಸೇರಿಕೊಂಡರು.

ಬೆಳಗಾವಿಯಲ್ಲಿ ರಾಷ್ಟ್ರೀಯ ಮುಖಂಡರ ಭಾಷಣಗಳು ಇವರ ಮೇಲೆ ಪ್ರಭಾವ ಬೀರಿದವು. ದೇಶಭಕ್ತಿ ಇವರನ್ನು ಆಕರ್ಷಿಸಿತು. ೧೯೩೦ರಲ್ಲಿ ಕರ್ನಾಟಕ ಸಿಂಹ ಎಂದು ಹೆಸರಾಗಿದ್ದ ಸ್ವಾತಂತ್ರ್ಯ ಹೋರಾಟಗಾರ ಗಂಗಾಧರರಾವ ದೇಶಪಾಂಡೆಯವರನ್ನು ಬ್ರಿಟಿಷ್ ಸರಕಾರ ಬಂಧಿಸಿದ ದಿನವೇ ನೌಕರಿಗೆ ರಾಜೀನಾಮೆ ಇತ್ತು ಸ್ವಾತಂತ್ರ್ಯ ಹೋರಾಟದ ಕೇಂದ್ರವಾಗಿದ್ದ ಪಾಚ್ಛಾಪುರ ಇವರ ಕರ್ಮಭೂಮಿಯಾಯಿತು. ಗಾಂಧೀಜಿಯವರ ಕರೆಗೆ ಓಗೊಟ್ಟು ಖಾದಿ ಪ್ರಚಾರಾದಲ್ಲಿ ತೊಡಗಿಸಿಕೊಂಡರು. ಉಪ್ಪಿನ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರಿಗೆ ಒಂಬತ್ತು ತಿಂಗಳ ಶಿಕ್ಷೆಯಾಯಿತು. ಜೈಲಿನಲ್ಲಿದ್ದಾಗಲೇ ಇಂಗ್ಲಿಷ್ ಭಾಷೆ ಅಭ್ಯಸಿಸಿದರು. ಇವರದು ಸ್ವಾತಂತ್ರ್ಯಯೋಧರ ಮನೆತನವಾಗಿತ್ತು. ಇವರ ಅಣ್ಣ ಸದು ಅತ್ತಿಗೆ ಪಾರ್ವತಿ, ತಮ್ಮ ಡಾ. ಗಜಾನನ ಇವರೂ ಹೋರಾಟದಲ್ಲಿ ಭಾಗವಹಿಸಿ ಕೈಲು ಶಿಕ್ಷೆ ಅನುಭವಿಸಿದ್ದರು. ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಬ್ರಿಟಿಷರ ದುರಾಡಳಿತದ ವಿರುದ್ಧ ಜನಜಾಗೃತಿ ಕಾರ್ಯ ಕೈಕೊಂಡರು. ವಿದೇಶಿ ವಸ್ತುಗಳ ಬಹಿಷ್ಕಾರ, ಸ್ವದೇಶಿ ಪ್ರಚಾರ, ಸಿಂದಿ ಸೆರೆ ಅಂಗಡಿಗಳ ಮುಂದೆ ಪಿಕೆಟಿಂಗ್, ಸಿಂದಿ ಗಿಡ ಕಡಿಯುವುದು. ರೈತರ ಮೇಲೆ ವಿಧಿಸಿದ ಹುಲಬನ್ನಿಕರದ ವಿರುದ್ಧ ಸತ್ಯಾಗ್ರಹ ೧೯೩೧ರಲ್ಲಿ ಖಾನೆಸುಮಾರಿ (ಜನಗಣತಿ) ಬಹಿಷ್ಕಾರ ಮಾಡಿ ಮತ್ತೆ ಜೈಲು ಸೇರಿದರು.

ದೇಶವು ಸ್ವಾತಂತ್ರ್ಯ ಪಡೆಯುವವರೆಗೆ ಮದುವೆ ಆಗುವುದಿಲ್ಲೆಂದು ಶಪಥ ಮಾಡಿದರು. ದೇಶ ಸ್ವತಂತ್ರವಾದ ಮೇಲೂ ಮದುವೆಯಾಗದೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರು ಯವಾಗಲೂ ತಾವೇ ನೂತ ನೂಲಿನಿಂದ ತಯಾರಿಸಿದ ಬಟ್ಟೆಗಳನ್ನು ತೊಡುತ್ತಿದ್ದರು. ನಾ.ಸು. ಹರ್ಡಿಕರರು ಸ್ಥಾಪಿಸಿದ ಹಿಂದೂಸ್ಥಾನ ಸೇವಾದಳದಲ್ಲಿ ಸೇರಿ ಯುವಕರನ್ನು ಸಂಘಟಿಸಿದರು. ಗಂಗಾಧರರಾವ ದೇಶಪಾಂಡೆಯವರೊಡನೆ ಹುದಲಿ ಗ್ರಾಮದಲ್ಲಿ ೧೯೩೭ರಲ್ಲಿ ಗಾಂಧಿ ಸೇವಾ ಸಂಘ ಸ್ಥಾಪಿಸಿದರು. ಗ್ರಾಮ ಸುಧಾರಣೆ ಅಸ್ಪೃಶ್ಯತೆ ನಿವಾರಣೆ ಮೊದಲಾದ ಕಾರ್ಯಗಳನ್ನು ಹಮ್ಮಿಕೊಂಡರು. ಕಾಯ್ದೆ ಭಂಗ ಚಳವಳಿ ಅಸಹಕಾರ ಚಳುವಳಿಗಳಲ್ಲಿ ಭಾಗವಹಿಸಿ ಸರಕಾರದ ಕೆಂಗಣ್ಣಿಗೆ ಗುರಿಯಾದರು. ಒಮ್ಮೆ ಮುರಗೋಡದಲ್ಲಿ ಏರ್ಪಡಿಸಿದ್ದ ದೊಡ್ಡ ಜಾಹೀರ ಸಭೆಯಲ್ಲಿ ಇವರ ಭಾಷಣ ನಡೆದಾಗ ಫೌಜದಾರನ ಪಿಸ್ತೂಲಿಗೆ ಎದೆಯೊಡ್ಡಿ ನಿಂತ ಇವರ ಧೈರ್ಯವನ್ನು ಕಂಡು ಫೌಜದಾರ ಹೆದರಿ ಹಿಂದೆ ಸರಿದಿದ್ದನು. ರಾಷ್ಟ್ರದ ಪ್ರಮುಖ ನಾಯಕರೊಡನೆ ಇವರು ಸಂಬಂಧವಿಟ್ಟುಕೊಂಡಿದ್ದರು.

೧೯೪೨ರಲ್ಲಿ 'ಚಲೇಜಾವ' ಚಳವಳಿ ಬೆಳಗಾವಿ ಜಿಲ್ಲೆಯಾದ್ಯಂತ ಅತ್ಯುತ್ಸಾಹದಿಂದ ಪ್ರಾರಂಭವಾಯಿತು. ತಾರು ಕತ್ತರಿಸುವುದು, ರೇಲ್ವೆ ಫಿಶ್ ಪ್ಲೇಟ್ ಕೀಳುವುದು, ಪೋಲೀಸ್ ಸ್ಟೇಶನ್, ಸರಕಾರಿ ಆಫೀಸುಗಳು, ಟಪಾಲ ಚೀಲಗಳನ್ನು ಸುಡುವುದು, ಸರಕಾರಿ ದಫ್ತರ ಸುಡುವುದು, ಸರಕಾರಿ ಹಣ ಲೂಟಿ ಮೊದಲಾದ ಕಾರ್ಯಗಳು ಅವ್ಯಾಹತವಾಗಿ ನಡೆದವು. ಚಳವಳಿಯನ್ನು ಬಲಪಡಿಸುವ ನಿಮಿತ್ತ ಅಣ್ಣು ಗುರೂಜಿಯವರು ಭೂಗತರಾಗಿ ಉಳಿದು 'ಗನಿಮಿಕಾವಾ' ಮಾದರಿ ಹೋರಾಟದಲ್ಲಿ ತೊಡಗಿದರು. ಪಾಚ್ಛಾಪುರದಲ್ಲಿ ಇವರ ತಂಡ ಬೀಡು ಬಿಟ್ಟಿದ್ದಾಗ ಬ್ರಿಟಿಷ್ ಪೋಲೀಸ್ ಪಡೆ ಮಧ್ಯರಾತ್ರಿ ಇವರ ಮೇಲೆ ಅಕ್ರಮಣ ಮಾಡಿ ಗುಂಡಿನ ಮಳೆಗೆರೆಯಿತು. ಆಗ ಅಲ್ಲಿ ಉರುಳಿದ ಹೆಣ ಅಣ್ಣು ಗುರೂಜಿಯದೇ ಎಂದು ಪೋಲೀಸರು ಸಂತಸ ಪಟ್ಟಿದ್ದರು.

ಆದರೆ ಅಣ್ಣು ಗುರೂಜಿ ಪಾರಾಗಿದ್ದರು. ಅಲ್ಲಿ ಬಿದ್ದ ಹೆಣ ಢಕಾಯಿತು ಮಾಡಲು ಬಂದಿದ್ದ ರಾಣ್ಯಾ ಎಂಬ ಢಕಾಯತನದಾಗಿತ್ತು. ಬೆಳಗಾವಿ ಜಿಲ್ಲೆ ಬ್ರಿಟಿಷ್ ಅಧಿಕಾರಿಗಳ ಹಾಗೂ ಪೊಲೀಸರ ನಿದ್ದೆಗೆಡಿಸಿತ್ತು. ಶ್ರೀರಂಗ ಕಾಮತ, ಚೆನ್ನಪ್ಪ ವಾಲಿ, ಅಣ್ಣು ಗುರೂಜಿ, ವಡವಿ ಮಸ್ತರ ಮತ್ತು ವಾಮನರಾವ ಬಿದರಿ ಇವರನ್ನು ಹಿಡಿದುಕೊಟ್ಟವರಿಗೆ ತಲಾ ೫೦೦೦ ರೂಪಾಯಿ ಬಹುಮಾನ ಘೋಷಿಸಿತ್ತು. ಫಿತೂರಿಯಿಂದ ಅಣ್ಣು ಗುರೂಜಿಯವರು ಬಿಜಾಪುರದಲ್ಲಿ ಮಧ್ಯರಾತ್ರಿ ಬಂದಿಸಲ್ಪಟ್ಟರು. ಮತ್ತೆ ಎರಡೂವರೆ ವರ್ಷ ಶಿಕ್ಷೆ ಅನುಭವಿಸಿದರು. ಅವರು ಒಟ್ಟು ಏಳು ಸಲ ೭ ವರ್ಷ ೧ ತಿಂಗಳು ಶಿಕ್ಷೆ ಅನುಭವಿಸಿದರು.

**ಸಮಾರೋಪ**

ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾವಿ ಜಿಲ್ಲೆಯ ಹುದಲಿಯ ಪಾತ್ರ ಗಮನಾರ್ಹವಾಗಿತ್ತು. ಹುದಲಿ ಗಂಗಾಧರರಾವ್ ದೇಶಪಾಂಡೆ ಇಡೀ ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯ ನಾಯಕರಲ್ಲಿ ಒಬ್ಬರಾಗಿದ್ದರು. ಹೀಗಾಗಿ ಅವರ ಕ್ರಿಯಾಶೀಲ ವ್ಯಕ್ತಿತ್ವ ಕಾರಣದಿಂದ ಗಾಂಧೀಜಿ ಹುದಲಿಯಂತಹ ಸಣ್ಣ ಹಳ್ಳಿಯಲ್ಲಿ ಒಂದು ವಾರ ಕಾಲ ನೆಲೆ ನಿಲ್ಲುವಂತಾದದ್ದು ಮಹತ್ವದ ಸಂಗತಿ. ತದನಂತರ ಗಾಂಧೀಜಿ ಕಾಂಗ್ರೆಸ್ ಪಕ್ಷದ ಕಾರ್ಯಚಟುವಟಿಕೆಗಳಿಂದ ದೂರ ನಿಂತು, ಗಾಂಧೀ ಸೇವಾ ಸಂಘದ ಮೂಲಕ ತಮ್ಮ ಯೋಜನೆಗಳನ್ನು ಭಾರತದ ಜನರ ಮುಂದೆ ಇಡುವ ಕಾರ್ಯ ಮಾಡಿದ್ದು ಒಂದು ಮಹತ್ತರವಾದ ಚಾರಿತ್ರಿಕ ಬದಲಾವಣೆ ಎಂದೇ ಹೇಳಬೇಕು. ಹೀಗಾಗಿ ಹುದಲಿಯ ಗಾಂಧೀ ಸೇವಾ ಸಂಘದ ಸಮ್ಮೇಳನ ಕನ್ನಡಿಗರ ಪಾಲಿಗೆ ಒಂದು ಅಭಿಮಾನ ಮತ್ತು ಹೆಮ್ಮೆಯ ಸಂಗತಿಯಾಗಿ ಉಳಿದುಕೊಂಡಿದೆ.

❖ ❖ ❖

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ<br>ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |